ಕೊರವಂಜಿ

ಸಂಪುಟ ೧೧ | ಜುಲೈ ೧೯೫೭ | ಸಂಚಿಕೆ ೪

ಕುಹಕಿಡಿಗಳು

ಈ ಸಾರಿಯ ಬಡ್ಜೆಟ್ಟಿನಲ್ಲಿ ಹೊಸ ತೆರಿಗೆಗಳು ಯಾವುವೂ ಇಲ್ಲ—ಆಹಾರದ ಬೆಲೆ ಹೆಚ್ಚಾದುದು ತೆರಿಗೆಯ ಲೆಕ್ಕಕ್ಕೆ ಸೇರುವುದಿಲ್ಲವಲ್ಲಾ !!

* * *

ಈ ಸಾರಿಯ ಬಡ್ಜೆಟ್, ನಾವು ಸಂಸಾರ ಮಾಡಿದಹಾಗೆಯೇ! ಖೋತಾವನ್ನು ಖೋತಾವಾಗಿಯೇ ಬಿಟ್ಟುಕೊಂಡು, ಇದ್ದಷ್ಟುದಿವಸ ಇರೋಣ ಎನ್ನುವಂತೆಯೇ, ಅದಕ್ಕೇ ಅದನ್ನು 'ಸಾರ್ವಜನಿಕರ ಬಡ್ಜೆಟ್' ಎನ್ನೋದು—ಎಂದೊಬ್ಬರು ಬರೆದಿದ್ದಾರೆ.

* * *

ಆಹಾರ ಹತೋಟಿ ಮಾಪಾ೯ಡಾದ ಮೇಲೆ ಜನತೆಗೆ ಬರಬಹುದಾದ ಖಾಯಿಲೆಗಳನ್ನು ಸರಿಪಡಿಸಲೆತ್ನಿಸಲು ಸಹಾಯಕವಾಗಲಿ ಎಂದು "ಹೆಲ್ತ್‌ಸೆಸ್" ಹಾಕಿಲ್ಲವಂತೆ.

* * *

"ಯಾಲೂ" ಪ್ರದೇಶಗಳ ಮೇಲೆ ಅಮೇರಿಕನ್ನರು ಬಾಂಬು ಎಸೆದುದು ತಪ್ಪು ಎಂದು—

ನಮ್ಮ ಹಳ್ಳಿಯ ಪಂಚಾಯಿತಿ ಸಭೆಯಲ್ಲಿ ತೀರ್ಮಾನ ಮಾಡಲಾಯಿತು!!

* * *

ಭಾಷಾವಾರು ಪ್ರಾಂತ್ಯಗಳ ವಿಷಯ ಚರ್ಚೆಗೆ ಬಂದಾಗ ಭಾಷೆಭಾಷೆಗೂ ಬೇಕಾದಷ್ಟು ಅಚ್ಚಿಸಲಾಗದ ಹೊಸ ಹೊಸ ಪದಗಳು ದೊರಕಿದುವಂತೆ.

* * *

ಸಮುದ್ರದ ತಳದ ಅಂಧಕಾರದಲ್ಲಿ ದೊಡ್ಡ ದೊಡ್ಡ ಕುರುಡು ಪ್ರಾಣಿಗಳಿವೆ ಯೆಂದು ಡಾ|| ಬ್ರೂನ್ ಅವರು ಹೇಳಿದ್ದಾರೆ.

—ದೊಡ್ಡ ದೊಡ್ಡ ಕುರುಡು ಪ್ರಾಣಿಗಳನ್ನು ನೋಡಬೇಕಾದರೆ ಯೂನೋ ಸಭೆಗೆ ಹೋದರೆ ಸಾಲದೆ?

* * *

ಸರ್ಕಾರದವರು ವಿದೇಶಿ ಮಶಿಯನ್ನು ಉಪಯೋಗಿಸುವುದು ತಪ್ಪಬೇಕು. (ಮಶಿ ತಯಾರಕರ ಸಮ್ಮೇಳನದಲ್ಲಿ)

—ಲೋಕಸಭೆ ಸೇರುವ ಹೊತ್ತಿಗೆ ಸ್ವದೇಶ ಮಶಿಯನ್ನೇ ಹಚ್ಚಿದರೆ ಒಳ್ಳೆಯ ದಲ್ಲವೇ?

* * *

ಲಂಡನ್ನಿನಲ್ಲಿರುವ ಮೈಸೂರು ವ್ಯಾಪಾರಿ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಿ ಕೊಂಡು ಅಲ್ಲಿದ್ದ ಆ ಕಛೇರಿಯನ್ನು ಮುಚ್ಚುತ್ತಾರಂತೆ.

—ಅಂದ ಮೇಲೆ ನಮ್ಮ ಸಚಿವರುಗಳ್ಯಾರೂ ವಿಲಾಯಿತಿ ಪ್ರವಾಸವನ್ನು ಎಣಿಕೆ ಹಾಕಿದ ಹಾಗಿಲ್ಲ ಅಲ್ಲವೇ?

* * *

ಭಾರತೀಯರ ಎರಡನೇ ಟೆಸ್ಟ್ ಆಟವನ್ನು ನೋಡಿದಮೇಲೆ, ಆಟಗಾರರು ದಕ್ಷಿಣ ಭಾರತೀಯರೋ ಎಂಬ ಅನುಮಾನ ಬಂದಿದೆಯಂತೆ.

—ಆರಂಭ ಶೂರಾಃ ಖಲು ದಾಕ್ಷಿಣಾತ್ಯಃ!!

* * *

ಕೋಲಾರದ ಬಡಗಿ ತನ್ನ ಅರವತ್ತನೇ ವರ್ಷದ ಹಬ್ಬದಲ್ಲಿ ಮರವಜ್ರದಲ್ಲಿ ತುಲಾಭಾರ ಮಾಡಿಸಿಕೊಂಡು ಬಡವರಿಗೆಲ್ಲಾ ಅದನ್ನು ಹಂಚಿದನಂತೆ.—ಅವನ ಹೆಸರೂ ಆಗಾಖಾ ಅಂತೆ.

—o—

ಉರಿಗಾಳು

ತಮ್ಮ ಕೈಕೆಳಗಿನ ಇಲಾಖೆಗಳ ವಿಷಯ ಏನೂ ತಿಳಿಯದೆ ಇರುವ ಮಂತ್ರಿಗಳಾದರೆ, ನಮ್ಮ ಕೆಲಸ ಸರಾಗ, ಎಂದು ಒಬ್ಬರು ಉನ್ನತಾಧಿಕಾರಿಗಳು ಹೇಳಿದರಂತೆ.... ಹೌದು, ಆದರೆ, ತಮಗೆ ಏನೂ ತಿಳಿಯದು, ಎಂದಾದರೂ ತಿಳಿದಿರಬೇಡವೆ ಅವರು?

* * *

ಮಂತ್ರಿಗಳೊಬ್ಬರು ಭಾಷಣ ಮಾಡುತ್ತಿದ್ದಾಗ, ಸಭಿಕರು ಒಮ್ಮೆ ಗೊಳ್ಳೆಂದು ನಕ್ಕರಂತೆ....ಇಡೀ ಭಾಷಣದಲ್ಲಿ ಆಗೊಮ್ಮೆ ಅವರ ಮಾತು ಜನಕ್ಕೆ ಅರ್ಥವಾಗಿರಬೇಕೆಂದು ತೋರುತ್ತದೆ.

* * *

ಫೆಯಿಲಾದ ಹುಡುಗರ ತಂದೆಯರ ಸಂಘ, ಎಂಬ ಒಂದು ಸಂಘ ಇಷ್ಟರಲ್ಲೇ ಸ್ಥಾಪನೆಮಾಡಲಿದೆ....ಅವರೂ ತಮ್ಮ ಕರ್ತವ್ಯಲೋಪವನ್ನು ಕುರಿತು ಪರಿತಪಿಸಬೇಕಾದದ್ದೇ.

* * *

ಮೆದುಳು ಜಾಸ್ತಿ ಇರುವವರಿಗೆ ಮಾತ್ರವೇ ವೈದ್ಯಕೀಯ ಸಂಶೋಧನೆ ಸಾಧ್ಯ ಎಂದು ಒಬ್ಬರು ಡಾಕ್ಟರು ಕಂಡು ಹಿಡಿದಿರುವರಂತೆ....ಅದನ್ನ ಅವರು ಹೇಗೆ ಕಂಡು ಹಿಡಿದರು, ಎಂಬುದೇ ಅವರ ಸ್ನೇಹಿತರಿಗೆಲ್ಲ ಆಶ್ಚರ್ಯ.

* * *

ತಮ್ಮ ಸಂಘಕ್ಕೆ ಆಜೀವ ಸದಸ್ಯರಾಗಬೇಕು, ಅದಕ್ಕಾಗಿ ೧೦೦ ರೂ. ಕೊಡಬೇಕು. ಎಂದು ಕಾರ್ಯದರ್ಶಿಯೊಬ್ಬರು ಕೇಳಿಕೊಂಡಾಗ, ಒಬ್ಬರು, "ವಾರ್ಷಿಕ ಚಂದಾ ತಿಳಿಸಿ; ನಾನಿನ್ನೆಷ್ಟು ದಿನ ಬಾಳೇನು" ಎಂದರಂತೆ....ಆಜೀವ ಎಂದರೆ, ಸಂಘ ಜೀವಿಸಿರುವಷ್ಟು ಕಾಲ, ಎಂಬುದನ್ನ ಅವರು ಮರೆತಂತಿದೆ.

* * *

ಅಕ್ಕಿಯ ಬೆಲೆ ಇಳಿಯುತ್ತಿರುವುದರ ನಿಜವಾದ ಕಾರಣ, ಕೃತಕ ರಾಸಾಯನಿಕ ಅಕ್ಕಿಯ ತಯಾರಿಕೆ ಸಂಶೋಧನೆ ಫಲಕಾರಿಯಾಗಿರುವುದರಿಂದ (ವರದಿ) ಕೋಳಿ ಕೂಗಿದ್ದೇ ಸೂರ್ಯೋದಯಕ್ಕೆ ಕಾರಣ.

* * *

ಎಂಜಿನೀರಿಂಗ್ ಕಾಲೇಜಲ್ಲಿ ಸೀಟುಸಿಕ್ಕಿದೆ, ನನ್ನ ಮಗನಿಗೆ, ಆದ್ದರಿಂದ, ಅವನಿಗೆ ಕನಿಷ್ಠ ಪಕ್ಷ ೫೦೦೦ ರೂ. ಆದರೂ ವರದಕ್ಷಿಣೆ ಕೊಡತಕ್ಕದ್ದು, ಎಂದು ಮಹನೀಯರೊಬ್ಬರು ಕಾಗದ ಬರೆದಿದಾರಂತೆ ...ದಾಕ್ಷಿಣ್ಯದ ಸೀಟು, ಎಂಬುದು ಖಾತ್ರಿ ಆಯಿತು.

* * *

ಕನ್ನಡ ಮಾಸಿಕೆಗಳನ್ನು ಕೊಂಡೋದುವವರೇ ಕಡಮೆಯಾಗುತ್ತಿದೆ (ಭಾಷಣ) ಅಂದರೆ, ಕನ್ನಡಜನರು ಹೆಚ್ಚು ಉದಾರಿಗಳಾಗುತ್ತಿದಾರೆ, ಎಂದ ಹಾಗಾಯಿತು.

* * *

ಸಾಹಿತ್ಯದಲ್ಲಿ ಅಶ್ಲೀಲ ಬೆರಸಬಹುದು, ಎಂಬ ವಾದವನ್ನು ಒಪ್ಪುವ ಹಲವು ಮಹನೀಯರು ನಮ್ಮೂರಿಗೆ ಬಂದು ನಿನ್ನೆ ಭಾಷಣಮಾಡಿದರು (ಸುದ್ದಿ) ನಮ್ಮೂರಲ್ಲಿ ಇಂಥವರು ಲಾಗಾಯ್ತಿನಿಂದಲೂ ಭಾಷಣ ಮಾಡುತ್ತಲೇ ಇರುವರಲ್ಲಾ, ಲೀಲಾಜಾಲವಾಗಿ?

* * *

ರೈಲ್ವೇ ಸ್ಟೇಷನ್ನಲ್ಲಿ ಇಳಿಯುತ್ತಲೂ ಅನೇಕರು ನನ್ನ ಸುತ್ತ ನಿಂತು, "ಗಾಡಿ ಬೇಕೆ, ಸಾರ್? "ಎಂದು ನನ್ನನ್ನು ಮುತ್ತಿದರು (ಪತ್ರ) ಅವರಿಗೆ ಬೇಡವೋ, ಏನೋ?

* * *

ಭಾಷಣ ಮಾಡುವುದಕ್ಕಾಗಿ ಸಭೆಗೆ ಬಂದಿದ್ದ ಇಬ್ಬರನ್ನು ನಮ್ಮ ಪ್ರತಿನಿಧಿ ಭೇಟಿ ಮಾಡಿದಾಗ, ಅವರು, "ನನ್ನನ್ನು ಈಗ ಏನೂ ಕೇಳಬೇಡಿ, ನಾನು ಮಾತಾಡಬೇಕು, ಯೋಚನೆ ಮಾಡುವುದಕ್ಕೆ ಅವಕಾಶವಿಲ್ಲ" ಎಂದರಂತೆ.

* * *

ಸಿಂಗ್‌ಮನ್ ರ್ಹೀಯನ್ನು ಕೊಲೆಮಾಡಲು ಯತ್ನಿಸಿ ವಿಫಲವಾದ ರ್‍ಯಾಷಿಟಾಯಿಯನ್ನು ಶಿಕ್ಷಿಸುವುದು ಖಂಡಿತವಂತೆ........ಮಹಾಪರಾಧವೇನೋ ಹೌದು, ಎಂದು ಅನೇಕರು ಒಪ್ಪುತ್ತಾರೆ.

* * *

ಎರಡು ಪಕ್ಷಗಳು ಅಧಿಕಾರಕ್ಕಾಗಿ ಹೋರಾಡುತ್ತಿರುವ ದೇಶದಲ್ಲಿ ರಾಷ್ಟ್ರಾಧ್ಯಕ್ಷರ ಸ್ಥಾನವನ್ನು ಸಾರ್ವಜನಿಕ ಚುನಾವಣೆಗೊಳಪಡಿಸುವುದು ಸರಿಯಲ್ಲ (ಭಾಷಣ) ಒಂದು ಪಕ್ಷ, ಸರಿಯಾಗಿದ್ದರೆ?

* * *

ಮಿಡ್ಲಿಸ್ಕೂಲ್ ಪರೀಕ್ಷೆಯನ್ನು ರದ್ದುಗೊಳಿಸಿದರೆ, ಸಾವಿರಾರು ಹಳ್ಳಿಗಳ ಎಣ್ಣೆ ವ್ಯಾಪಾರಿಗಳು ಅದನ್ನು ಪ್ರತಿಭಟಿಸಬಹುದೆಂದು ಸರ್ಕಾರದ ಗಮನಕ್ಕೆ ಬಂದಿದೆಯಂತೆ.

ಮುಯ್ಯಿ ಬಲುಹುಳಿ

ರಾಮಣ್ಣ ಸೋದರ ಸಂಬಂಧ ಅಂತ ಕಲ್ಯಾಣಿಯನ್ನು ಅವನಿಗೆ ಕೊಟ್ಟು ಮದುವೆ ಮಾಡಿದರು. ಕಲ್ಯಾಣಿ ಲೋಯರ್‌ಸೆಕೆಂಡರಿ ಪರೀಕ್ಷೇಲಿ ಸಂಸ್ಥಾನಕ್ಕೇ ಮೊದಲಿಗಳಾಗಿದ್ದ ಶಹಣೆ ಹುಡುಗಿ. ಆದರೆ ಸ್ವಂತ ತಾಯಿ ಇಲ್ಲದವಳಾದ್ದರಿಂದ, ಹಾಗೂ ಬಲ ತಾಯಿ ಬೆನ್ನ ಹಿಂದೆ ಇದ್ದುದರಿಂದ ಅವಳನ್ನು ಬೇಗನೇ ಮದುವೆಮಾಡಿ ಸಂಸಾರ ಹೂಡಿಸಿದರು. ಕಲ್ಯಾಣಿ ಗಂಡ ಯಥಾಪ್ರಕಾರ ಶಾಲಾಮಾಸ್ತರು. ಪ್ರೈಮರಿ ಶಾಲೆ. ಟ್ರೈನಿಂಗ್ ಆಗಿದೆ ಅಂತ, ಶಾಲಾ ಇನ್ಸ್‌ಪೆಕ್ಟರ ಮಕ್ಕಳಿಗೆ ಮನೆ ಪಾಠ ಚೆನ್ನಾಗಿ ಪುಕ್ಕಟೆ ಹೇಳಿಕೊಡುತ್ತಾನೆ ಅಂತ ಅವನನ್ನೂ ಬೆಂಗಳೂರಿನಲ್ಲಿಯೇ ಇರಿಸಿ ಕೊಂಡಿದ್ದರು. ಬಡತನದ ಸಂಸಾರವಾದರೂ ಕಲ್ಯಾಣಿ ಬುದ್ಧಿವಂತಿಗೆಯಿಂದ ಸುಗಮವಾಗೇ ಸಾಗುತ್ತಿತ್ತು—ಮಲ್ಲೇಶ್ವರದಲ್ಲಿ—

ಸರೋಜಾ ಕಲ್ಯಾಣಿಯ ಜತೆಗಾರ್ತಿ. ಲೋಯರ್‌ಸೆಕೆಂಡರಿ ಆದಮೇಲೆ, ಮೂರನೇಕ್ಲಾಸ್ ಇಲ್ಲದಕಾರಣ ಎರಡನೇ ಕ್ಲಾಸ್‌ನಲ್ಲಿ ತೇರ್ಗಡೆಯಾದಮೇಲೆ, ಯಥಾ ಸಾವಕಾಶ ಹಾಯ್ ಸ್ಕೂಲು, ಕಾಲೇಜು ಮೆಟ್ಟಲುಹತ್ತಿ, ಎದೆ ಬರುವವೇಳೆಗೆ ಶೃಂಗಾರ ಚೆನ್ನಾಗಿ ಕಲಿತು, ಅಪ್ಪನ ಅಧಿಕಾರ ಬಲದಿಂದ, ಐ. ಎ. ಎಸ್ ಗಂಡನ ಕೈ ಹಿಡಿದು ಬಸವನಗುಡಿ ಬಂಗಲೀಲಿ ಮನೆ ಮಾಡಿಕೊಂಡು, ಮೋಟಾರಿನಲ್ಲೇ ಮಿಟುಕಲಾಡುತ್ತಿದ್ದಳು. ಅವಳ ಸ್ವಭಾವವೇ ಹಾಗೇ—ನವಲಿನ ಹಾಗೆ—ನವಿಲು ಕಣ್ಣು ಬಿಟ್ಟ ಹಾಗೇ ತಾನೂ ಕಣ್ಣು ಬಿಡುತ್ತಾ ಬಲು ಮೋಜು ಮಾಡುತ್ತಿದ್ದಳು. "ನನಗಿರುವ ಐಶ್ವರ್ಯ ನಾನು ಅನುಭವಿಸಿದರೆ ಏನುಬಂತು ಭಾಗ್ಯ—ನಾನು ಅನುಭವಿಸುವುದನ್ನು ಇತರರು ನೋಡಿ ಅಯ್ಯೋ ಅಂದರಲ್ಲವೇ ಭಾಗ್ಯ" ಎನ್ನುವ ಮನದಾಸೆ.

ಶನಿವಾರ ಸಾಯಂಕಾಲ ಸುಮಾರು ಐದು ಗಂಟೆ. ನೀರು ಸೋರುತ್ತಿದ್ದ ನಲ್ಲಿಯನ್ನು ಬಿಗಿಮಾಡಲು ರಾಮಣ್ಣ ಒದ್ದಾಡುತ್ತಿದ್ದ. ನೇಣು ಹಾಕುವಷ್ಟು ಹಗ್ಗ ಅದಕ್ಕೆ ಬಿಗಿದಿದ್ದ. ಹಳೇ ಬಟ್ಟೆಗಳನ್ನೆಲ್ಲಾ ಕಟ್ಟಿ ಕಟ್ಟಿ ಬೆವರ ಹನಿ ನಲ್ಲಿಗಿಂತ ಹೆಚ್ಚಾಗಿ ಸುರಿಸಿದ್ದ. ಆಗ ಕಲ್ಯಾಣಿ ಅಡಿಗೆ ಮನೆಯಿಂದ ಬಂದು ನೋಡಿ "ಅಯ್ಯೊ! ಯಾಕೆ ಇಷ್ಟು ಪ್ರಯಾಸ. ಸದ್ಯಕ್ಕೆ ಹುಣಿಸೇಬೀಜ ಚಚ್ಚಿ ನಲ್ಲಿಗೆ ತುಂಬುತ್ತೇನೆ. ನೀರುತಟ್ಟಿ ಅದು ಉಬ್ಬಿ ಬಿಗಿಯಾಗಿ ಹಿಡಿದುಕೊಳ್ಳುತ್ತದೆ. ಆ ಮೇಲೆ ಬೇರೆ ವಾಷರ್‌ತಂದು ಹಾಕೋಣ ಎಂದು ಹೇಳಿ ಹಾಗೆಯೇ ಮಾಡಿದಳು.

'ಎಷ್ಟು ಜಾಣೆಯೇ ನೀನು ಅಂತ ರಾಮಣ್ಣ ಅಂದಿದ್ದು ಅವಳಿಗೇನೂ ಹೊಸದಾಗಿದ್ದಿಲ್ಲವಾದ್ದರಿಂದ ಅವಳಿಗೆ ಬಲು ಖುಷಿಯೇನೂ ಆಗಲಿಲ್ಲ.

೨

ಸಂಜೆ ಆರುಗಂಟೆ ಹೊತ್ತು. ಅವರ ಮನೆಮುಂದೆ ದೊಡ್ಡ ಕಾರೊಂದು ಬಂದು ನಿಂತಿತು. ನಮ್ಮನೆಗೆ ಕಾರಿನಲ್ಲಿ ಒರುವವರಾರು, ಇದೇನೂ ಚುನಾವಣೆ ಕಾಲವಲ್ಲ—ಎಂದು ಹೊರಗೆ ಹೋಗಿ ನೋಡುತ್ತಾನೆ—ಒಂದು ಥಳುಕಿನ ಹೆಂಗಸು ಮೋಟಾರು ನಡೆಸಿಕೊಂಡು ಬಂದು, ಅಲ್ಲಿ ನಿಲ್ಲಿಸಿ ಇಳಿಯುತ್ತಿದ್ದಾಳೆ. ದೃಷ್ಟಿಸಿ ನೋಡಿದ. ಓಹೋ! ಸರೋಜಮ್ಮನವರು ಎಂದು ತಿಳಿಯಿತು. ಅಲ್ಲಿಂದಲೇ ಕಲ್ಯಾಣಿ ಕಲ್ಯಾಣಿ ಸರೋಜಮ್ಮ ಒಂದಿದ್ದಾರೆ ಅಂತ ಕೂಗಿದ. ಆಕೆಯೂ ಬಂದಳು. "ಏನು ಸರೋಜ ಚೆನ್ನಾಗಿದೀಯಾ. ನಿಮ್ಮ ಯಜಮಾನರು ಸೌಖ್ಯವಾಗಿದ್ದಾರೆಯೇ ನಿಮ್ಮ ಮನೆ ನಾಯಿ ಚೆನ್ನಾಗಿದೆಯೇ? ಎಂದು ಕ್ಷೇಮ ಸಮಾಚಾರವನ್ನೆಲ್ಲಾ ಕೇಳಿದಳು.

ಸರೋಜನೂ ಪರಸ್ಪರವಾಗಿ ನೀನು ಚೆನ್ನಾಗಿದ್ದೀಯಾ ನಿನ್ನ ಯಜಮಾನರು ಚೆನ್ನೇ, ನಿನ್ನ ಮಕ್ಕಳೆಲ್ಲವೂ ಚೆನ್ನಾಗಿದೆಯೇ, ಮನೆ ಸೋರುತ್ತೆ ಅಂದಿದ್ದೆ ಅದು ಈಗ ಸರಿಯಾಗಿದೆಯೇ ಎಂದು ಕ್ಷೇಮ ಸಮಾಚಾರವನ್ನೆಲ್ಲಾ ಕೇಳಿದಳು.

ಆ ಮೇಲೆ ನೋಡಿಕಲ್ಯಾಣಿ ಕಡೇ ಮಗುವನ್ನು—ತಪ್ಪಾಯಿತು—ನಾಲ್ಕನೇ ಮಗುವನ್ನು ಸರೋಜ ಎತ್ತುಕೊಂಡಿದ್ದು. ಅದು ಆಗತಾನೇ ನಿದ್ರೆಯಿಂದ ಎದ್ದಿತ್ತು. ಆಗಲೇ ಸರೋಜನಿಗೆ ಬಲುಕೋಪ ಬಂದಿದ್ದು. ಉಟ್ಟ ಸೀರೆ ಒದ್ದೆಯಾದರೆ ಮನೆಗೆ ಹೋಗಿ ಬೇರೆಸೀರೆ ಉಟ್ಟುಕೊಂಡು ಆರೂವರೆ ಗಂಟೆಗೆ ಮಹಿಳಾ ಸಮಾಜದ ಸಭೆಗೆ ಬರಲು ಹೊತ್ತಿಲ್ಲದೆ ಇದ್ದರೆ—ಕೋಪಬರುಲ್ಲವೇ ?

"ಏನು ಕಲ್ಯಾಣಿ! ಮಕ್ಕಳಿಗಿಷ್ಟು ಬುದ್ಧಿ ಹೇಳಿಕೊಡುಕ್ಕೆ ಬರುಲ್ಲವೆ ನಿನಗೆ. ಸಂಯಮ, ಶಿಸ್ತು, ಎಳೆಯ ವಯಸಿನಲ್ಲೇ ಕಲಿಸಬೇಕು. ಏನೋ ನಿನ್ನ ಮಗು ಅಂತ ಎತ್ತಿಕೊಂಡರೆ ಹೀಗಾಗಬೇಕೇ" ಎಂದು ರೇಗಿಯೇ ಬಿಟ್ಟಳು.

ಕಲ್ಯಾಣಿ ಕಿಮಕ್ಕಮಕ್ಕನ್ನಲಿಲ್ಲ. ರಾಮಣ್ಣನಿಗೆ ಆಶ್ಚರ್ಯ—ಯಾರಾದರೂ ಏನಾದರೂ ಅಂದರೆ ಎಳ್ಳು ಸಿಡಿದಹಾಗೆ ಸಿಡಿಯುತ್ತಿದ್ದ ಕಲ್ಯಾಣಿ ಈಗೇಕೆ ಹೀಗಿದ್ದಾಳೆ ಅಂತ. ಆದರೆ ಅವಳ ಕಣ್ಣನೋಟ ದರ್ಭೆ ತುದಿಯ ಹಾಗೇ ಇತ್ತು. ಏನು ಸನ್ನಾಹ ಇವಳ ಮನಸ್ಸಿನಲ್ಲಿ ಹೆತ್ತಿದೆಯೋ ಎಂದು ರಾಮಣ್ಣನಿಗನ್ನಿಸಿದ್ದು ಸಹಜ.

'ಅಯ್ಯೋ! ಸರೋಜ ಎಂಟು ತಿಂಗಳು ಮಗುವಿಗೆ ಸಂಯಮ ಶಿಸ್ತು ಹೇಗೆ ಹೇಳಿಕೊಡುವುದೇ! ನಮ್ಮಂತಹ ಬಲಿತವರಿಗೇ ಆಗುಲ್ಲ. ಅವಕ್ಕೆಲ್ಲೇ ಹೇಳಿ ಕೊಡೋಣ. ಈಗೇನಾಯಿತು. ನನ್ನ ಸೀರೆ ಒಂದನ್ನು ಉಟ್ಟುಕೊಂಡು ನೀನು ಸಭೆಗೆ ಹೋಗುವಂತೆ ಅಷ್ಟರಲ್ಲೇ ಒಂದು ಬಟ್ಟಲು ಕಾಫಿ ಮಾಡಿಕೊಡುತ್ತೇನೆ ಎಂದಳು.

"ನಾನು ಉಟ್ಟುಕೊಳ್ಳುವಂತಹ ಸೀರೆ ಇದೆಯೇ ನಿನ್ನ ಹತ್ತಿರ" ಎಂದು ಕೇಳಿ ದಳು ಸರೋಜಾ.

ಕಲ್ಯಾಣಿ ಕಣ್ಣು ಕುಶಾಗ್ರಕ್ಕಿಂತ ಚೂಪಾಯಿತು. 'ಅದಕ್ಕೇನೆ ಸರೋಜ! ನನ್ನ ಮದುವೆ ಸೀರೆ ಇದೆ—ಈ ಮನೆಗೆ ಬಂದಾಗ ತಂದ ಸೀರೆ ಒಂದಿದೆ—ಎರಡರಲ್ಲಿ ಯಾವುದಾದರೊಂದು ಸರಿ ಹೋಗಬಹುದು' ಎಂದು ನಮ್ರವಾದ ಹತ್ತಿ, ಬೆಣ್ಣೆ, ಯಂತಹ ಮೃದು ಮಾತುಗಳನ್ನು ಆಡಿದಳು.

ಆಗಲಿ ಎಂದು ನಿರ್ವಾಹವಿಲ್ಲದೆ ಸರೋಜ ಒಳ ಕೊಠಡಿಗೆ ಹೋದಳು. ಕಾಫಿ ಮಾಡುಕ್ಕೆ ಅಂತ ಕಲ್ಯಾಣಿ ಅಡಿಗೆ ಮನೆಗೆ ಹೋದಳು. ನಾನು ಹಜಾರದಲ್ಲೇ ಇದ್ದೆ. ಒಂದೇ ನಿಮಿಷದಲ್ಲಿ ಕಲ್ಯಾಣಿ ಹೊರಕ್ಕೆ ಬಂದು ಪಕ್ಕದ ಮನೆಗೆಹೋಗಿ ಸ್ವಲ ಸಕ್ಕರೆ ತರುತ್ತೇನೆ ಮುಗಿದುಹೋಗಿದೆ. ಬೆಲ್ಲ ಹಾಕಿದರೆ ಕಾಫಿ ಚೆನ್ನಾಗುಲ್ಲ. ಅಲ್ಲದೆ ಕುಡಿಯದೇ ಹೋದರೂ ಹೋದಳೇ ಅಂತ ಹೇಳಿ ಹೊರಕ್ಕೆ ಹೋದಳು. ಅವಳು ಹೋದ ಮೇಲೇ ನನಗೆ ಜ್ಞಾಪಕಕ್ಕೆ ಬಂದುದು ಆ ಮಧ್ಯಾಹ್ನ ಶಾಲೆಯಿಂದ ಹಿಂತಿ ರುಗುವಾಗ ಅರ್ಧ ವೀಸೆ ಸಕ್ಕರೆ ನಾನೇ ತಂದಿದ್ದೆ ಅಂತ.

ಐದು ನಿಮಿಷದಲ್ಲಿ ಕಲ್ಯಾಣಿ ನಗುತ್ತಾ ಬಂದು ಅಡಿಗೆ ಮನೆಗೆ ಹೋದಳು.

ಏಳು ನಿಮಿಷದಲ್ಲಿ ಕಾಫಿ ತುಂಬಿದ ಬಟ್ಟಲುಗಳನ್ನು ಹಿಡಿದುಕೊಂಡು ಹೊರಕ್ಕೆ ಬಂದಳು.

'ಇನ್ನೂ ಮುಗೀಲಿಲ್ಲವೇನೇ ಸರೋಜ' ಅಂತ ಎಂಟನೇ ನಿಮಿಷ ಕೂಗಿದಳು.

ಹತ್ತನೇ ನಿಮಿಷ ಸರೋಜ ಹೊರಕ್ಕೆ ಬಂದಳು. ಕಲ್ಯಾಣಿ ನಮ್ಮನೆಗೆ ಬಂದ ದಿವಸ ಉಟ್ಟ ಸೀರೆ ಅದು. ನನಗೆ ಕಣ್ಣು ಚಪಲ ತೀರಲೇ ಇಲ್ಲ.

ಬೇಗ ಬೇಗ ಎಲ್ಲರೂ ಕಾಫಿ ಕುಡಿದೆವು. ಹಣೆ ಕಿರುಬೆವರನೊರಸಿಕೊಳ್ಳುತ್ತ, ಕೆಂಪೇರಿದ್ದ ಸರೋಜ ಕಾರಿನ ಹತ್ತಿರ ಹೊರಟಳು. ನಾವು ದಂಪತಿಗಳು ಕಾರಿನ ಹತ್ತಿರ ಹೋಗಿ ಬಾಗಿಲು ತೆಗೆದು ಅವಳನ್ನು ಕೂರಿಸಿದೆವು. ಅವಳು ಕಾರು ಹೊರಡಿ ಸಲು ಉದ್ಯುಕ್ತಳಾಗಿ, ಹೋಗಿಬರುತ್ತೇನೆ ಕಲ್ಯಾಣಿ ನಿನ್ನ ಸೀರೆ ನಾಳೆ ಕಳಿಸುತ್ತೇನೆ. ಆ ಜವಾನನ ಕೈಲೇ ನನ್ನ ಸೀರೆ ಕಳಿಸು ಅದನ್ನು ಡಿಸಿನ್ಫೆಕ್ಟ್ ಮಾಡಿಸಿ ನಂತರ ಡೋಭಿಗೆ ನಾನೇ ಹಾಕುತ್ತೇನೆ ಎಂದಳು ಸರೋಜಾ.

ಕಲ್ಯಾಣಿಯ ಕಣ್ಣು ಕುಶಾಗ್ರದ ಅಗ್ರಕ್ಕಿಂತ ಚೂಪಾಯಿತು ಆದರೆ ಮೂಗಿನ ತುದಿಯಲ್ಲಿ ಮಂದಹಾಸ ನಾಟ್ಯವಾಡುತ್ತಿತ್ತು. ಆ ಮೂಗಿನ ತುದೀಗೆ ಒಂದು.... ಕೊಡೋಣವೇ ಎನ್ನಿಸಿತು.

ಆದರೆ ಆ ಹಾಳುಕಾರು ಗುರ್ ಗುರ್ ಎಂತೇ ವಿನಹ ಹೊರಡಲೇ ಇಲ್ಲ. ಬೇಗ ಇಳಿದು ಕಾರಿನ ಮುಂಭಾಗದ ಕೆರಗನ್ನ ಎತ್ತಿ ನೋಡಿದಳು ಸರೋಜಾ. ನಾನೂ ನೋಡಿದೆ ಏನೂ ತಿಳಿಯಲಿಲ್ಲ ಅವಳಿಗೆ—ನಂಗೂ ಹಾಗೆ—ತಿರುಗಿ ಆ ಕಾರಿನ ಬಾನೆಟ್ ಮುಚ್ಚಿದಳು.

ಇಲ್ಲಿ ಟ್ಯಾಕ್ಸಿ ಸಿಗುತ್ತೆಯೇ ಅಂದಳು ಸರೋಜ.

"ಇದು ಮಲ್ಲೇಶ್ವರದ ಕಾರ್ಮಿಕರ ಬಡಾವಣೆ" ಎಂದಳು ಕಲ್ಯಾಣಿ

ಅಳುವುದೊಂದು ಬಾಕಿ ಸರೋಜ.

ಹೇಗೂ ಹೆಂಗರುಳು ಕಲ್ಯಾಣಿಗೆ "ಜಟ್ಕಾ ಸಿಗುತ್ತೆ ಹೊತ್ತಿಗೆ ಸರಿಯಾಗಿ ಮಹಿಳಾ ಸಮಾಜಕ್ಕೆ ಹೋಗಬಹುದು" ಎಂದಳು.

ನನ್ನ ಅಟ್ಟಿದಳು. ಬೇಗ ರೇಸಿನ ಜಟ್ಕಾ ತೆಗೆದುಕೊಂಡು ಬಂದೆ. ಸರೋಜಾ ಹಸೆಮೇಲೆ ಕೂತಹಾಗೆ ಆ ಜಟ್ಕಾತುಂಬಾ ಕೂತುಕೊಂಡು ಹೊರಟುಹೋದಳು— ಆ ಜಟ್ಕಾ ಕುಣಿತಕ್ಕೆ ಸರಿಯಾಗಿ ಅವಳೂ ಭಾಗ ಭಾಗವಾಗಿ ಕುಲುಕುತ್ತಾ ಹೊರಟೇ ಹೋದಳು.

ನಿಂತಮೋಟಾರುಗಾಡಿಯನ್ನು ಪರೀಕ್ಷಿಸಿದೆ. ಗಾಡಿಯ ಹಿನ್ನಳದ ತುಂಬಾ ಹುಣಿಸೆಬೀಜದ ಚರಟ ತುಂಬಿತ್ತು.

ಮುಯ್ಯಿ ಬಲು ಹುಳಿ ಎಂದು ಆಗ ಅರ್ಥವಾಯಿತು. ವಯಸ್ಸಾದಷ್ಟೂ ಹುಳಿಹೆಚ್ಚು ಎಂದು ನಿದರ್ಶನವಾಯಿತು.

ಕಲ್ಯಾಣಿ ಓದದೇ ಇದ್ದರೂ ಬಲುಶಹಣೆ ಬಲು ಬುದ್ಧಿವಂತೆ.

— ಪಾಪಿ.



ಉತ್ತರದ ಪೌರುಷ

ನನ್ನ ಸೀಮಂತಪುತ್ರನ ಉಚ್ಚ ವಿದ್ಯಾಭ್ಯಾಸಕ್ಕಾಗಿ ನಾನು ಎಷ್ಟು ಕಾತುರವಾಗಿದ್ದರೂ ಅವನಿಗೆ ಸೀಟು ಸಿಗಲಿಲ್ಲವಲ್ಲಾ, ಏನು ಮಾಡಲಿ? (ಶ್ರೀ ನಾರಣಯ್ಯ, ಚಿಂತಾಮಣಿ) ನಮ್ಮ ಸಲಹೆ ಏನೆಂಬುದು ಗೊತ್ತೇ ಇದೆ:—"ನಿಲ್ಲಿಸಿ."

ರಾಜಾಜಿಯ ಉಪದೇಶದಂತೆ, ಜನ ದೇವರಲ್ಲಿ ನಂಬಿಕೆಯಿರಿಸಿದರೆ, ಕಾಂಗ್ರೆಸ್ಸಿಗೇ ಅನುಕೂಲ? (ಕು. ನಂಜುಂಡರಾವ್, ಸೇಲಂ) ತಮ್ಮ ತಪ್ಪುಗಳನ್ನೆಲ್ಲ ದೇವರ ಮೇಲೆ ಹೊರಿಸಿ ಬಿಡಬಹುದಲ್ಲವೆ?

ಶಾಲಾ ಕಾಲೇಜುಗಳು ತೆರೆಯುವುದರೊಳಗೆ ವಿದ್ಯುಚ್ಛಕ್ತಿ ಖೋತವನ್ನು ಸಂಪೂರ್ಣ ತೆಗೆದುಹಾಕ ಬೇಕೆಂದು ನೀವೇಕೆ ಒತ್ತಾಯಪಡಿಸುತ್ತಿಲ್ಲ? (ಚಿ|| ಸೋಮಸುಂದರ, ಹಲಸೂರು) ಸಿನಿಮ ಮಾಲೀಕರು ಆಗಲೇ ಇದಕ್ಕಾಗಿ ಪ್ರಯತ್ನಿಸುತ್ತಿದಾರೆ

ಸರ್ಕಾರಿ ಕಾಗದ ಪತ್ರವೊಂದನ್ನು ಭುವನೇಶ್ವರನಗರದ ಒಂದು ಹಸು ತಿಂದಿತಂತಲ್ಲಾ, ಇದರಿಂದಾದ ಅನಾಹುತವೆಷ್ಟು, ಬಲ್ಲಿರಾ? (ಗೋ. ಸಂ. ಸಂಘ, ಮೈದಾಪುರ) ಸದರಿ ಹಸು ತಹಲ್‌ವರೆಗೆ ಆರೋಗ್ಯವಾಗಿದೆಯಂತೆ. ಆದ್ದರಿಂದ, ಅನಾಹುತವೇನೂ ಆಗಿಲ್ಲವೆಂಬುದು ಸ್ಪಷ್ಟ.

ಒಂದು ಬಾರಿ ತಗುಲಿದರೆ, ಎಂದೆಂದಿಗೂ ವಾಸಿಯಾಗದ ಜ್ವರ ಅಥವಾ ಖಾಯಿಲೆ ಯಾವುದಾದರೂ ಇದೆಯೆ, ಜಗತ್ತಿನಲ್ಲಿ, ಇನ್ನೂ? (ಪಂಡಿತ್ ರಾಮಾಚಾರ್, ಬೆಂಗಳೂರು) ಇದೆ; ರಾಜಕೀಯ ಜ್ವರ.

ನಾನು ಓ ಎಂದರೆ ನನ್ನ ಹೆಂಡತಿ ಠೋ ಎನ್ನುತ್ತಾಳೆ; ನಮ್ಮಲ್ಲಿ ಸದಾ ವಾಗ್ವಾದ; ಇದನ್ನು ಕೊನೆಗಾಣಿಸುವುದು ಹೇಗೆ, ದಯವಿಟ್ಟು ತಿಳಿಸಿ (ಶ್ರೀ ವೀರಯ್ಯನವರು, ಹೆಬ್ಬಾಳು) ಇನ್ನುಮೇಲೆ, ಆಕೆ ಓ ಎನ್ನಲಿ; ನೀವೂ ಓ ಎನ್ನಿ.

ನಮ್ಮ ರೇಡಿಯೋದಲ್ಲಿ ನಾವು, ಹಾಡುವವರ ಮುಖಭಾಂಗಿಯನ್ನು, ಎಂದು ನೋಡುತ್ತೇವೆ, ತಿಳಿಸಿ (ಪ್ರೊ|| ನಾರದ ವಿಲಾಸ, ಮದ್ರಾಸ್) ನೋಡದೆ ಇರುವುದೇ ಮೇಲಲ್ಲವೆ?

ರೇಷನ್ ಪದ್ಧತಿಯನ್ನೂ ಕಂಟ್ರೋಲ್ ನಿಯಮಗಳನ್ನೂ ತೆಗೆದುಹಾಕುವುದರಿಂದ ಆಗುವ ಅನಾನುಕೂಲಗಳನ್ನು ನೀವು ಪರಿಗಣಿಸಿದೀರಾ? (ಮ್ಯಾನೇಜರ್, ಗರೂಡ್ ಬಸ್ ಸರ್ವಿಸ್) ಬಸ್ಸುಗಳಲ್ಲಿ ಈಗಿನಷ್ಟು ಜನರನ್ನು ತುಂಬಲು ಸಾಧ್ಯವಿಲ್ಲವೆನ್ನುವುದೇನೋ ನಿಜ.

ಕಾರ್ತಿಕ್ ಚಾಟರ್ಜಿಯವರ ಮೊದಲನೆಯ ಚಿತ್ರ ಯಾವುದು? (ಕುಮಾರ ಕೋದಂಡಶಾಸ್ತ್ರಿ, ಮಲ್ಲೇಶ್ವರ) ಮೂರನೆಯ ಕ್ಲಾಸಲ್ಲಿದ್ದಾಗ ಅವರು ಬರೆದ ಅವರ ಮೇಷ್ಟರ ವ್ಯಂಗ ಚಿತ್ರ.

ಕುಕ್ಕುವನ್ನು ಹಲವರು ಕಕ್ಕೂ ಎಂದೂ ಇನ್ನು ಕೆಲವರು ಕುಕ್ಕೂ ಎಂದು ಹೇಳುವರಲ್ಲಾ, ಯಾವುದು ಸರಿ? (ಕುಮಾರ ಸಂಗಪ್ಪ, ಹೊಸೂರು) ಇನ್ನು ಕೆಲವರು ಕೋಗಿಲೆ ಎಂದೂ ಹೇಳುತ್ತಾರೆ.


ಕುಂ ಕುಂ ಚಿತ್ರವನ್ನು ತೆಲುಗಿಗೆ ಡಬ್ ಮಾಡುತ್ತಾರಲ್ಲಾ, ನಿಜವೇ? (ಕುಮಾರಿ ಅನುಸೂಯ, ತುಮಕೂರು) ಕನ್ನಡದವರಾದ ನಮಗೇಕೆ ಆ ಗಾಬರಿ?

ಮುಂದಕ್ಕೆ ಓದಲು ಅವಕಾಶವಿಲ್ಲದೆ, ಯಾವ ಕಾಲೇಜಲ್ಲೂ ಸೀಟ್ ಸಿಗದೆ, ನಾವು ಮೂರು ಜನ ಅಣ್ಣ ತಮ್ಮಂದಿರು ಮನೆಯಲ್ಲೇ ಉಪವಾಸ ಕೂತಿದೇವಲ್ಲಾ, ನೌಕರೀನೂ ಇಲ್ಲದೆ ನಮಗೆ ಜವಾಬು ಹೇಳುವವರು ಯಾರು? (ಕೆ. ಟಿ. ವೆಂ. ಬೆಂಗಳೂರು.) ನಿಮ್ಮ ಜನಕ ಜನನಿಯರನ್ನೇ ಕೇಳಿ.

ನೂರಿಪ್ಪತ್ತು ವರ್ಷ ಬದುಕಬೇಕಾದರೆ ನಾವು ಅನುಸರಿಸಬೇಕಾದ ಉಪಾಯ ವೇನು? (ಪೆನ್‌ಷನರ್ ಭೀಮರಾಯರು, ಹೊಸಹಳ್ಳಿ) ನೂರಿಪ್ಪತ್ತು ವಯಸ್ಸಾದಾಗ ಲಾದರೂ ಪುಷ್ಕಳವಾಗಿ ಊಟ ಮಾಡಬಹುದು, ಎಂಬ ಆಸೆ ನಂಬಿಕೆಯನ್ನು ಉಳಿಸಿ ಕೊಂಡಿರುವುದು.

ಹನ್ನೆರಡು ವರ್ಷಕ್ಕಿಂತ ಕೆಳವಯಸ್ಸಿನ ಮಕ್ಕಳಿಗೆ ಹೋಟಲುಗಳಲ್ಲಿ ಅರ್ಧ ಸೈಜಿನ ದೋಸೆ ಇಡ್ಲಿಗಳನ್ನು ತಯಾರಿಸಿ, ಮಾರಬಾರದೆ? ನೀವು ಸೂಚನೆ ಕೊಡು ವಿರಾ? (ಕುಮಾರಿ ಪಂಕಜ, ಮೈಸೂರು) ಅವರೇನೋ ತಯಾರಿಸುತ್ತಿದಾರೆ; ಆದರೆ, ಈಗ ಅವನ್ನು ದೊಡ್ಡವರಿಗೇ ಮಾರುತ್ತಿದಾರೆ, ಅಷ್ಟೆ.

—ನಾ. ಕ.



ಒಂದು ನಾಯಿ:–"ನಾಯಿ ಅಂದ್ರೆ ನಾರಾಯಣ ಅಂತ ತಿಳ್ಕೊಂಡವ್ರೆ ಕಾಣ್ಸೋ. .ಈ ಮಂಕ್ ಜನ!
ಮತ್ತೊಂದು ನಾಯಿ:–ಅದ್ಕೇ ಕಾಣಪ್ಪ ಅನ್ನ ಹಾಕೋಕ್ಬದ್ಲು ಮಣ್ಣು ಹಾಕ್ತಾ ಇರೋದು.

ಇದರ ಮರ್ಮ

ರಂಗದಾಸ ನಮ್ಮೂರಿನ ಕಾರ್ಮಿಕರ ಮುಖಂಡ. ಅರಳಿಕಟ್ಟೆಯ ಮೈದಾನ ದಲ್ಲಿ ನಿಂತು ಭಾಷಣಮಾಡ ಹತ್ತಿದರೆ, ನೆರೆದ ಕೂಲಿಕಾರ ಸಮೂಹ ಪುಂಜಿ ಮುಂದಿನ ಹಾವಿನಹಾಗೆ ತಲೆ ಆಡಿಸುತ್ತಾ ತಮ್ಮನ್ನು ತಾವೇ ಮರೆಯುತ್ತಾರೆ. ಕಡೆಗೆ ಅವನು ಏನು ಹೇಳಿದರೂ "ಸೈ" ಎಂದು ಅದನ್ನೂ ಮಾಡಲು ಸಿದ್ಧವಾಗುತ್ತಾರೆ.

ಆಹಾರದ ಬೆಲೆ ಏರಿಸಿದ್ದಕ್ಕೆ ಅವನಿಗೆ ಕೆಂಡಾಮಂಡಲ ಕೋಪ. ನನ್ನ ಸಿಗ ರೇಟ್ ಹಣಕ್ಕೆ ಈ ಸರಕಾರ ಸಂಚು ತಂದಿತಲ್ಲಾ ಅಂತ ಅವನಿಗೆ ರಂಗಿನ ರೇಗು. ಆ ಭಾನುವಾರ ಸಾಯಂಕಾಲ ಕಾರ್ಮಿಕರ ಪ್ರಚಂಡ ಸಭೆ ಸೇರಿಸಿ, "ಅನ್ನ ಕೊಡುವ ಸರಕಾರಕ್ಕೆ ಅಧಿಕಾರ ಕೂಡದು" "ಅನ್ನದ ಬೆಲೆ ಏರಿಸಿದ ಸರ್ಕಾರಕ್ಕೆ ಧಿಕ್ಕಾರ"—ಇತ್ಯಾದಿ ಸಮೂಹ ಘೋಷಣೆಗಳ ಮಧ್ಯೆ ಆತ ಅರಳೀಕಟ್ಟೆಯ ಮೇಲೆ ನಿಂತು, ಪ್ರತಿಷ್ಠಿತವಾದ ನಾಗರಕಲ್ಲಿನ ಮೇಲೆ ಕೈಯಿಟ್ಟುಕೊಂಡು ಅಮೋಘವಾದ ಭಾಷಣ ಮಾಡುತ್ತಿದ್ದ.

ಭಾನುವಾರ ನನಗೆ ರಜಾ. ಹಾಗೇ ಅಡ್ಡಾಡೋಣ ಅಂತ ಹೋದಾಗ ಇದನ್ನು ನೋಡಿದೆ. ಏನು ಹೇಳ್ತಾನೋ ಎರಡು ನಿಮಿಷ ಕೇಳೋಣ ಅಂತ ಅಲ್ಲೇನಿಂತೆ.

"ಅಣ್ಣ ತಮ್ಮಂದಿರೆ, ಅಕ್ಕ ತಂಗಿಯರೇ! ಈ ಸರಕಾರದವರು ನಮ್ಮ ಅನ್ನದ ಬೆಲೆ ಏರಿಸಿ, ಬಂದ ದುಡ್ಡಿನಲ್ಲಿ ನಮ್ಮ ಖಾಯಿಲೆಗಳಿಗೆ ಅನುಕೂಲ ಮಾಡುತ್ತೇವೆ, ಆಸ್ಪತ್ರೆ ಕಟ್ಟಿಸುತ್ತೇವೆ ಎಂದೆಲ್ಲಾ ಹೇಳಿಕೆ ಕೊಟ್ಟಿದ್ದೂ ಕೊಟ್ಟಿದ್ದೇ. ಆದರೆ ಅಂತಹ ವೈದ್ಯಶಾಲೆಗಳಲ್ಲಿ ಹಣವಂತರು ಮಾತ್ರ ಗುಣಮುಖರಾಗುತ್ತಾರೆ, ಬಡವರು ಬಚಾವಾಗ ಬೇಕಾದರೆ ಬ್ರಹ್ಮ ಬರೆದುದು ಗಟ್ಟಿಯಾಗಿರಬೇಕು" ಇಂತೆಲ್ಲಾ ಹೇಳುತ್ತಿದ್ದ.

ನನಗೇಕೋ ಬೇಸರವಾಯಿತು. ಎಲಾ! ಇವನ! ಇದರ ಮರ್ಮಕೂಡ ಇವನಿಗೆ ತಿಳಿಯದಲ್ಲಾ! ಏನೋ ಓದದೇಇದ್ದರೂ ಬುದ್ದಿ ಇದೆ ಅಂತಿದ್ದೆ–ಕಾಲೇಜು ಮೆಟ್ಟಲು ಹತ್ತಲಿಲ್ಲ ಅಂದಮೇಲೆ ಜೀವನದ ಪರಿಚಯ ಇದೆ ಅಂತಿದ್ದೆ. ಈ ಸಣ್ಣ ವಿಷಯವನ್ನು ಕೂಡ ಇವನು ಅರಿತಿಲ್ಲವಲ್ಲಾ ಎಂದು ಮನಸ್ಸಿಗೆ ಬಲು ಬೇಸರ ವಾಯಿತು. ಮುಂದೆ ಭಾಷಣ ಕೇಳಲಾರದೆ ಹೊರಟುಹೋದೆ.

ತುಂಬಾದೂರ ಊರಾಚೆ ಅಡ್ಡಾಡಿ ವಾರದ ಕಸರತ್ತನೆಲ್ಲಾ ಒಂದೇ ಸಾಯಂ ಕಾಲ ಮುಗಿಸಿ, ಹಿಂತಿರುಗುವ ವೇಳೆಗೆ ಸುಮಾರು ಎಂಟು ಗಂಟೆ ಆಗಿದ್ದಿರಬಹುದು.

ಇನ್ನೇನು ನಮ್ಮನೇ ರಸ್ತೆ ಸಿಕ್ಕಿತು ಅನ್ನೋಹೊತ್ತಿಗೆ ರಂಗದಾಸ ಸಾರ್ವಜನಿಕ ಭಾಷಣ ಮುಗಿಸಿಕೊಂಡು ಹೂ ಮಾಲೇನ ಕೈಮೇಲೆ ಹಾಕಿಕೊಂಡು, ಸಿಕ್ಕಿದ.

"ನಮಸ್ಕಾರ ಪಂಡಿತರೇ! ಸೌಖ್ಯವಾಗಿದ್ದೀರಾ" ಎಂದ.

"ಸೌಖ್ಯವಾಗೆ ಇದ್ದೀಪ್ಪಾ ನಿನ್ನ ಭಾಷಣ ಕೇಳೋತನಕ ಆ ಮೇಲೆ ಯಾಕೋ ವಾಕರಿಕೆ ಬಂದ ಹಾಗಾಯ್ತು. ಹೊರಟುಹೋದೆ" ಎಂದೆ.

"ಯಾಕೆ ಪಂಡಿತರೆ? ನಾನು ಚೆನ್ನಾಗಿ ಭಾಷಣಮಾಡ್ತೀನೆ ವಿಷಯಗಳನ್ನು ಕಾಲೇಜು ಮಾಸ್ತರುಗಳ ಹಾಗೆ ವಿಶದೀಕರಿಸಿ ಸ್ಪಷ್ಟವಾಗಿ ಹೇಳ್ತೀನೆ, ಮಾತಿನ ಜೋಡಣೆಯಲ್ಲಿ ಯಾವ ರಾಜಕೀಯದ ಪಕ್ಷದ ಮುಖಂಡರಿಗೂ ಏನೂ ಕಡಿಮೆಇಲ್ಲ ಹೀಗೆಲ್ಲಾ ಜನ ಅನ್ನುತ್ತಾರೆ. ಪತ್ರಿಕೆಗಳು ಬರೆಯುತ್ತವೆ. ಹಾಗಿರುವಲ್ಲಿ ನೀವು "ವಾಕರಿಕೆ" ಅಂತೀರಲ್ಲ. ಯಾಕೆ? ಯಾರಾದರೂ ನಿಮ್ಮ ರೋಗಿಗಳು ಕಡಲೇ ಕಾಯಿ ಕಳಿಸಿದ್ದರೆ ನಿಮಗೇ?" ಎಂದ.

'ಅಲ್ಲವಯ್ಯಾ! ಹಾಗಲ್ಲಾ! ನೀನು ಕಾಲೇಜು ಮಾಸ್ತರ ಹಾಗೆ ಹೇಳಿದೆ, ದಿಟ. ಮುಖಂಡರ ಭಾಷಣಗಳ ಸರಿದೂಗುವಂತೆ ಹೇಳಿದ್ದೀ ಹೇಳಿದೆ, ಸತ್ಯ. ಆದರೆ ವಿಷಯಾನೇ ಗೊತ್ತಿಲ್ಲವಲ್ಲಯ್ಯಾ ನಿನಗೆ" ಎಂದೆ.

"ಅದು ಹೇಗೆ" ಎಂದ.

"ನೋಡು! ರಂಗದಾಸ್. ಅನ್ನದ ಬೆಲೆ ಏರಿಸಿ ಬಂದ ದುಡ್ಡಿನಲ್ಲಿ ಆ ಕಾರಣ ದಿಂದಲೇ ಬಂದ ಖಾಯಿಲೆಗಳನ್ನು ಪರಿಹರಿಸಲು ಸರ್ಕಾರ ದವಾಖಾನೆಗಳನ್ನು ತೆರೆ ಯುತ್ತದೆ. ಅಲ್ಲಿ ಐಶ್ವರ್ಯವಂತರಿಗೇ ಪಂಡಿತರು ಗುಣಪಡಿಸುವುದು, ಬಡವರು ಬಚಾವಾಗಬೇಕಾದರೆ ಜಾತಕ ಬಲವಾಗಿರಬೇಕು ಎಂದೆಲ್ಲಾ ಹೇಳಿದೆ. ನೀನು ಹೇಳಿದ್ದು ದಿಟ. ಆದರೆ ಕಾರಣಮಾತ್ರ ನೀನು ತಿಳಿದಂತೆ ಅಲ್ಲ. ಐಶ್ವರ್ಯ ವಂತರು ಹಣ ಕೊಡುತ್ತಾರೆ ಆ ಕಾರಣ ಪಂಡಿತರು ಅವರಿಗೆ ಉತ್ತಮ ಚಿಕಿತ್ಸೆಯನ್ನೂ ಶ್ರದ್ಧೆಯಿಂದ ಮಾಡುತ್ತಾರೆ ಅವರುಗಳಿಗೆ ಗುಣವಾಗುತ್ತೆ. ಬಡವರಿಗೆ ಶ್ರದ್ಧಾ ಚಿಕಿತ್ಸೆಮಾಡುಲ್ಲ ಅದಕ್ಕಾಗಿ ಅವರಿಗೆ ಶ್ರಾದ್ಧ ಎಂದು ಅರ್ಥ ಬರುವಂತೆ ಮಾತ ನಾಡಿದೆ. ಅದು ಸುಳ್ಳು"

"ಅಂದರೆ! ನಾನು ಹೇಳಿದ್ದು ದಿಟ ಅನ್ನುತ್ತೀರಿ ಕಾರಣ ತಪ್ಪುತ್ತೀರಿ. ಇದರ ಮರ್ಮ" ಎಂದು, ನನ್ನ ಮಾತಿಗೆ ಮಧ್ಯೆ ಬಾಯಿ ಹಾಕಿದ

'ಹೀಗೇ' ಕೇಳು! ಪಂಡಿತರೇನೋ ಬಡವರು ಭಾಗ್ಯವಂತರು ಅಂತ ಬೇಧ ವಿಲ್ಲದೆ ಚಿಕಿತ್ಸೆ ನಡೆಸುತ್ತಾರೆ. ಆದರೆ ಬಡವರ ಖಾಯಿಲೆಗಳು ದಿಟವಾದದ್ದು

ಅವಕ್ಕೇ ಗುಣವಾಗುವುದಿಲ್ಲ. ಭಾಗ್ಯವಂತರ ಖಾಯಿಲೆಗಳೆಲ್ಲಾ ಭಾಗ್ಯದ ಬೆನ್ನ ಹಿಂದೆ ಬಿದ್ದದ್ದು. ಪಂಡಿತರಿಗೆ ಆ ಭಾಗ್ಯವನ್ನೆಲ್ಲಾ ಹಂಚಿಕೊಟ್ಟಮೇಲೆ, ಅಷ್ಟು ಹಣ ಖರ್ಚಾದದ್ದು ಅವರಿಗೆ ತಿಳಿದಕೂಡಲೆ ಆ ಖಾಯಿಲೆಗಳು ತಾನಾಗಿ ತಾನೇ ವಾಸಿಯಾಗುತ್ತವೆ. ಪಂಡಿತರು ವಾಸಿಮಾಡಿದರು ಅಂತ ಭಾಗ್ಯವಂತರು ಬೊಬ್ಬೆ ಇಡುತ್ತಾರೆ. ಮಣ್ಣು ತಿಂದೆ ಅಂತ ಮನುಷ್ಯ ಹೇಳಿಕೊಳ್ಳುತ್ತಾನೆಯೇ? ಅದೇ ಇದರ ಗುಟ್ಟು." ಎಂದೆ. ರಂಗದಾಸ ಹೂ ಮಾಲೆಯನ್ನ ಕೈಯಿಂದ ತೆಗೆದು ನನ್ನ ಕೊರಳಿಗೆ ಹಾಕಿದ.

"ಪಂಡಿತರೇ! ನನಗೆ ಇದರ ಮರ್ಮ ಅರ್ಥವಾಗಿರಲಿಲ್ಲ ನೀವು ನನಗೆ ಜ್ಞಾನೋಪದೇಶ ಮಾಡಿದಹಾಗಾಯ್ತು. ಇನ್ನು ಮೇಲೆ ಈ ಪಂಡಿತ ವೈದ್ಯರ, ಹಕೀಮರ, ಮಂತ್ರ ಮಾಟಗಾರರ. ಸುದ್ದಿಗೆ ಹೋಗುವುದಿಲ್ಲ.

ಮುಂದಿನ ಭಾನುವಾರದ ಭಾಷಣಕ್ಕೆ ಬನ್ನಿ—ಕಡಲೇಕಾಯಿ ತಿಂದು ಬನ್ನಿ ಆದರೂ ವಾಕರಿಕೆ ಬರದಹಾಗೇ ಭಾಷಣ ಬಿಗಿಯುತ್ತೇನೆ. ಕೇಳಿ, ನಂತರ ನನಗೆ ಹೇಳಿ." ಎಂದ.

"ಸ್ರಿ" ಎಂದೆ. ಉಳಿದವರಂತೆ.

—ಪಂಡಿತ.

—o—

ಧರ್ಮ

(ಡಿ. ವಿ. ಜಿ. ಯವರ ಕ್ಷಮೆಯಾಚಿಸಿ)

ಮಾತು :

ಕೋಪ ಸಹಜದ ಧರ್ಮ ರೇಗುವುದು ಪತಿಧರ್ಮ
ರೇಗಿ ರೇಗಿಸುತಿಹುದೆ ಪುರುಷ ಧರ್ಮ—
ರೇಗಿ ರೇಗಿಸಿ ಉರಿದು ಸತಿಯ ಗೋಳಾಡಿಸುವ
ವರವ ನಿಮಗಿತ್ತನಲ ದೇವ ಬೊಮ್ಮ!

ಮರು **ಮಾತು** :

ಅಳುವು ಸಹಜದ ಧರ್ಮ ಅಳುತಿಹುದೆ ಸ್ತ್ರೀ ಧರ್ಮ
ಅತ್ತು ಅಳು ಬರಿಸುವುದೇ ಸತಿಯ ಧರ್ಮ—
ಅಳುವ ಅಳಿಸುವ ಅತ್ತು ಪತಿಯಗೋಳಾಡಿಸುವ
ಲಲನೆಯರ ಸೃಜಿಸಿದನೆ ಮಂಕು ಬೊಮ್ಮ!

—ಸರೋಜಿನಿ.

ಪ್ರಮದುವತಿ-ರುರು

ಒಂದು ಕತೆ, ಕೇಳು :
ಶುರು—ಅಂತ ಆಳು.
ರುಸಿ, ರುಸಿಯ ಮಗ; ರೂಪೋ—ಓ! ಮದನ!
(ಬಾರತದ ಮೊದಲಾಗ ಯೇಳತಾರ್ ಇದನ!)
ಇವಗ್ ಒಬ್ಬ ಳೆಣ್ಣು!
ಅಣೆಗಣ್ಣು ಇವಗೆ! ಪ್ರಮದುವತಿ ಔಳ್ ಎಸರು.
ಇಂದ್ರನ್ ಯೆಂಗಸರು—ಔಳ್ ಎದರು ಕೆಸರು.
ರೂಪದಲಿ—ರತಿ!
ಗುಣದಾಗ—ಪಾರುವತಿ!
ಯಿದ್ದೆಯೋ—ಸರಸ್ನೋತಿ!
ಆ ಪ್ರಮದುವತಿ!

ಯಿಂತೋಳ ರುಸಿ ರುರು ಮನಸಾರೆ ಮೆಚ್ಚಿ—
ಇನ್ನೇನು ಮದಿವಿ—ಪ್ರಮದುವತಿ ಸತ್ತಳು, ಆವು ಕಚ್ಚಿ!
ಬ್ಯಾಡ ಗೋಳಾಟ, ಪಾಪ, ರುರುವಿನದು ;
ಅವನ ಸಂಕಟಬೆಂಕಿ ಅಬ್ಬಿ, ಅರಡಿ, ಅದು—
ಬೂಮಿನಾವರಿಸಿ, ಆಕಾಸ ಮುಚ್ಚಿ, ಸೊರ್ಗದಾ ತಾವು
ನಿಂತು, ನಾಲಗೆ ಚಾಚಿ—ಇಂದ್ರಂಗು ತಟ್ಟಿತಾ ಕಾವು.

ಕುಂತ್ ಅಂಗೆ ನೋಡಿದ ಇಂದ್ರ :
"ಎಲಎಲಾ! ಇವನ್ ಎಣ್ಣ ಆವ್ ಕಚ್ಚಿಕೊಂದ್ರೆ—
ನಂಗ್ ಯಾಕೆ ಈ ತಾಪ ? ತೊಂದ್ರೆ ?

ಇಂದ್ರ, ನನ ಮಲ್ಲಿ, ಅವ—ದರ್ಮರಾಜ!
ನಡದೀತು ಎಲ್ಲಿ ಅನ್ಯಾಯ—
ಬೇಡ್ಯಾರು ಯಾರ್ ಎಲ್ಲಿ ಸಾಯ—
ಅಲ್ಲಿ ಅವನಿಗೆ ತಾಪ ತಟ್ಟೋದೆ ಸಾಜ!

ಬಂದ ಇಳಿದ್ ಇಂದ್ರ—ರುರು ಇದ್ದ ತಾಕ್ಕೆ.
ಅಂದ: ರುರು! ನನ್ನ ನೀ ಕರದದ್ದು ಯಾಕೆ?"

"ಪ್ರಮುದುವತಿ—ನನಜೀವ—ಪೋಯ್ತು! ನಾ ಸತ್ತೆ"
"ಸರಿ; ಅದಕೆ ನಾನ್ ಏನು ಮಾಡೊಕ್ ಆಗುತ್ತೆ?"
"ಮತ್ತೆ ಬದುಕಿಸಿಕೊಡು—ಪೋದ ನನ್ ಎಣ್ಣ!"
"ಅದು ಮಾತ್ರ ಆಗಕಿಲ್ಲಣ್ಣ!"
"ತಡಿಲಾರೆ, ಇಂದ್ರ—ಯೆಣ್ಣ ಕಳಕೊಂಡ ತಾಪ!"
"ಯಿಂಗೆ ಅಟ ಇಡಿದೀಂದ್ರೆ—ನಂಗೆ ಬಲೆಕ್ವಾಪ!"

ಮರೀಲಾರ, ಪಾಪ, ರುರು—ತನ ಪ್ರಮುದುವತಿನ.
ಇಂದ್ರ, ಎಲ್ಲಾ ಬಲ್ಲ—ಇವನ ಆ ವೆತಿನ.
ಇವನ ದುಕ್ಕನ ನೋಡಿ ಅವಗೂನು ಕಳ್ಳು
ಕುದಿತ್ತೈತೆ; ಆದರೂ ಇದರಾಗ ಜಳ್ಳು
ಎಸ್ಟ್ ಐತೊ, ಕಾಳ್ ಎಸ್ಟೊ—ಇದು ಔನ್ ಪರೀಕ್ಸೆ.
(ಮಲ್ಲಿ, ಯಾಕೆ ಬತ್ತೈತೊ ಜನಕಿಂತ ಸೀಕ್ಸೆ?)

"ಪ್ರಮುದುವತಿಗಾಯಸ್ಸು ಮುಗೀತಪ್ಪ, ರುರು.
ಒಂದ್ ದಫ ಮುಗಿದದ್ದು ಮತ್ತೆ ಎಂಗೆ ಸುರು?
ಒಂದ್ ಐತ್ ಉಪಾಯ—ನಿನ ಆಯಸಿನಲಿಸ್ಟ
ನೀ ಕೊಟ್ರೆ—ಬುಡುಬುಡು—ಅದು ಬಲೇ ಕಸ್ಟ!"
—ಅಂತಂದ ಇಂದ್ರ.

ಆಗ....ಮೋಡ ಬಿಟ್ ಚಂದ್ರ
ಚೆಲ್ಲಕಿಲ್ವಾ, ಮಲ್ಲಿ, ತಂಪು ತಿಂಗಳನ—
ಅಂಗೆನೇ ಬೆಳಗಿಸ್ತ ಮುಖದ ಅಂಗಳನ—
ರುರು ಅಂದ: "ಇಂಗೆ—
ಕೇಳ್ಬೇಕ ನಂಗ?
ಪ್ರಮುದುವತಿ ಪೋಗಿ ನಾ ಬದುಕಿರಾಕಿಂತ
ಒಂದ್ ನೂರು ವರುಸ—
ಅರ್ದ ನನ ಆಯಸಾ ದಾರೆ ಎರಿತೀನಿ—
ಬ್ಯಾಗ್ ಔಳ ಕರಸ!
ಇಸ್ಟೇನು? ಅಸ್ಟೇನು? ಅರ್ದ ಇದೆ! ಇಕಾ!
ಪ್ರಮುದುವತಿ ನನ ಪ್ರಾಣ! ಬೇಕು ನನಗನಕಾ!

ಆಟ ಯಿಂಗೆ ಅವ ಯಿಡದ;
ಅದಕ್ ಇಂದ್ರ ನುಡಿದ:

"ಭಪ್ಪರೇ ರುರು ರುಸಿ. ಸಿನ ಮಾತು ಮಾತ್ರಲ್ಲ—ಮನಸುನೂ ಬಲ್ಲೆ;
ಗಂಡು ಸಾಪಿತ್ರಿಸೀ, ಅವಳಂಗೆ ದಾಟಿದೇ ಸಾವಿನಾ ಎಲ್ಲೆ !
ವೃದಯ ನನಗೂ ಐತೆ. ಅದು ಏನು ಗೋಳಿಗೆ ಕರಗದಾ ಕಲ್ಲೆ ?
ಮತ್ತೆ ಬದುಕಿಸಿಕೊಂಡೆ ನಿನ ಪ್ರಮದುವತಿನ! ಅದೊ ನಿಂತು ನೋಡಲ್ಲೆ!'


ಎದ್ದು ಬಂದವಳು ಒಳ್ಳೆ ಸಿದ್ದೆ ತಿಳಿದಂತೆ—
ಪ್ರಮುದುವತಿ ರುರುವಿನ್ ಅತ್ತ್ರ:
ನಂಬಲಾರದ ಪುನ್ಯ! ರುರು ಆಗ ಆಕ್ಸಸ
ಗಾಳಿಯುಲಿ ಬಾಳಿಪತ್ತ್ರ!

ಇತ್ತ ಮದುವಣಿಗ ರುರು ನಿಂತ—ಎದುರ್ ಅತ್ತ
ಪ್ರಮದುವತಿ ಮದುವಣಿಗಿತಿ,
ಯಿರಿ ಪುರೋಹಿತ ಯಿಂದ್ರ—ಅವ ಯೇಳಿ ಮಂತ್ರ
ಆಯ್ತುವರ ಮದಿವೀ ಕತಿ.

ಮುಂದ, ಮಕ್ಕಳ ಪಡೆದು ಪ್ರಮದುವತಿ ರುರು—
ಯಿಂಗೆನೇ ಅವರ ಸಂಸಾರ ನಡದು—
ಯಮದರ್ಮ ಕರದಾಗ ರುರು ಅಂದ, "ಸಿದ್ದ!
ಇದೊ ಒಂದೆ, ಪ್ರಮದುವತಿ ಕೈನ ಯಿಡದು!"

—ನಾಗ.

—O—



ಮುನ್ಸಿಪಾಲ್ಟಿ ಕಮಿಷನರು ನಮ್ಮ ರಸ್ತೇಲಿ ನಡೆದರೆ—

ನನ್ನ ಭಾಗ್ಯ

ನಮ್ಮ ಮನೆ ಹುಡುಗರೆಲ್ಲ, ದೇವರ ದಯೆಯಿಂದ, ಈ ಸಲ, ಫೆಯಿಲು! ಯಾವ ಜನ್ಮದ ಪುಣ್ಯಫಲವೊ, ಎಲ್ಲರೂ, ಫೆಯಿಲಾದರು. ಮೊದಲನೆಯವನು ಬಿ. ಎಸ್. ಸಿ ಯಲ್ಲಿ ಪಲ್ಟಿ; ಎರಡನೆಯವನು ಇಂಟರಿನಲ್ಲಿ ಬಿದ್ದ; ಮೂರನೆಯದು, ಅದೊಂದು ಹುಡುಗಿ, ಅದಕ್ಕೆ ಈ. ಪಿ. ಎಸ್ಸು ಇಲ್ಲ; ನಾಲ್ಕನೆಯವನಿಗೆ ಲೋಫರ್ ಸೆಕೆಂಡರೀ ಅಂತಾರಲ್ಲ ಅದರಲ್ಲಿ ನಾಮ. ಇನ್ನೇನಾಗಬೇಕು, ನನ್ನ ಭಾಗ್ಯಕ್ಕೆ?

ಈ ತಿಂಗಳು ಫೀಜಿನ ಖರ್ಚು, ಪುಸ್ತಕದ ಖರ್ಚು, ಆ ಫೀ ಈ ಫೀ ಅಡ್ಮಿಷನ್ನು ಅಸೋಸಿಯೇಷನ್ನು—ಒಂದೂ ಕೂಡ ಬೇಕಾಗಿಲ್ಲ. ನಾನು ಎಲ್ಲರೂ ಪಾಸಾಗಿಬಿಟ್ಟಿದ್ದರೆ, ೩೦೦ ರೂಪಾಯಿ ನಷ್ಟ, ಸಾಲ ಎತ್ತ ಬೇಕಾಗಿರುವುದು. ಸಾಲ ಮಾಡಬೇಡಿ, ನನ್ನ ಕುತ್ತಿಗೇಲಿರುವ ಚೆಯಿನ್ ಮಾರಿಬಿಡಿ, ಅಂತ ಅವಳು ಬೇರೆ ಹೇಳುತ್ತಿದ್ದಳು. ಈಗ, ಅವಳ ಸರ ಅವಳ ಕೊರಳಿಗೆ ಉಳಿಯಿತು.

ಇವನೆಲ್ಲಾದರೂ ಅಪ್ಪಿತಪ್ಪಿ ಬಿ. ಎಸ್. ಸಿ ಮಾಡಿಬಿಟ್ಟಿದ್ದರೆ, ಮುಂದೇನು ಗತಿ ಕಾಣಿಸುತ್ತೀಯಾ ನನಗೆ, ಅಂತ ಮೂಲೇಲಿ ಕೂತುಬಿಡುತ್ತಿದ್ದ. ನನ್ನ ಕುತ್ತಿಗೆಗೇನೇ ನಾನು ಅವನನ್ನ ನೇಣು ಹಾಕಿಕೊಂಡು, ಮೇಷ್ಟರಾಗಿ ಹೋಗೋ, ಅಂತ ಶಪಿಸ ಬೇಕಾಗಿತ್ತು. ಈಗ, ಸದ್ಯಃ, ಫೇಲಾಗಿದಾನೆ. ಆದ್ದರಿಂದ, ಅವನ ಸಮಸ್ಯೆ ಆರು ತಿಂಗಳು ಈಚೆಗೆ ಹೋಯಿತು. ಅನ್ನ ತಿಂದುಕೊಂಡು, ಪುಷ್ಕಳವಾಗಿ ಮನೇಲಿ ಬಿದ್ದಿರುತಾನೆ. ಅವನನ್ನೂ ಹಿಡಿದುಕೊಂಡು, ನಾನು....ರ ಸೋದರಮಾವನ ಅಳಿಯನ ಫ್ರೆಂಡಿನ ಮನೆಗೋ,....ರ ಹಿಂದಿನ ಜೂನಿಯರಿನ ತಮ್ಮನ ಮಾವನಮನೆಗೋ ಅಲೆಯ ಬೇಕಾಗಿಲ್ಲ.

ಇನ್ನು, ಆ ಇಂಟರ್‌ನಲ್ಲಿ ಡಿಕ್ಕಿ ಹೊಡೆದನಲ್ಲಾ, ಅವನನ್ನ ನಾನು ಎಷ್ಟು ವಂದಿಸಿದರೂ ಸಾಲದು. ನನಗೆ ಈ ರೀತಿ ಉಪಕಾರ ಮಾಡುವುದಕ್ಕೆ ಅವನೂ ಎರಡು ವರ್ಷಗಳಿಂದ ತುಂಬ ಸಾಹಸ ಪಟ್ಟ. ಅಪ್ಪಿ ತಪ್ಪಿ ಕೂಡ, ಒಂದು ಪುಸ್ತಕ ಓದಲಿಲ್ಲ, ಒಂದು ಪುಟ ಬರೆಯಲಿಲ್ಲ, ಒಬ್ಬ ಮೇಷ್ಟರಿಗೂ ವಿಧೇಯನಾಗಿರಲಿಲ್ಲ. ಜಾಣ; ಅನುಭವಸ್ಥ; ಪಾಸಾದರೆ, ಎಂಥ ಅಗ್ನಿಪರೀಕ್ಷೆ, ಎಂಥ ಕಷ್ಟ ಪರಿಸ್ಥಿತಿ, ಎನ್ನುವುದನ್ನು ತಿಳಿದಿದ್ದ. ದೇವರು ಅವನ ಹಾಗೂ ನನ್ನ ಪ್ರಾರ್ಥನೆಯನ್ನು ಮನ್ನಿಸಿದ. ಅವನ ನಂಬರನ್ನು ಅಚ್ಚು ಹಾಕಿಸಲಿಲ್ಲ.

ಅಯ್ಯೋ, ಅಯ್ಯೋ, ಅವನೇನಾದರೂ ಗ್ರಹಚಾರವಶಾತ್ ಪಾಸಾಗಿ ಬಿಟ್ಟಿದ್ದರೆ, ನಾನು ಹೀಗೆ ಹಾಯಾಗಿ ಕೂತು ಲೇಖನ ಬರೆಯುವುದಕ್ಕಾದೀತೆ? ಲೇಖನ ಹಾಗಿರಲಿ, ನಿದ್ದೆ, ಊಟ, ನಗು,—ಒಂದೂ ಸಾಧ್ಯವಿಲ್ಲ. ನನ್ನ ಜಾತಿ, ನನ್ನ ಕುಲ ನನ್ನ ಸಂಬಳ—ಅವನ ಜಾತಿ ಅವನ ಬುದ್ಧಿ ಉದ್ದ ತೂಕ—ಇವುಗಳನ್ನೆಲ್ಲ ನಮ್ಮ ನಮ್ಮ ಹಣೆಗಳಿಗೆ ಹಚ್ಚಿಕೊಂಡು ನಾನೂ ಅವನೂ, ನಂಟರು ಸ್ನೇಹಿತರು ಪರಿಚಿತಸ್ಥರು ಇವರನ್ನೂ ಗುಂಪುಗಟ್ಟಿಕೊಂಡು, ಟ್ಯಾಕ್ಸಿಯಲ್ಲಿ ಕೂತು, ಮೆಂಬರುಗಳ ಮನೆಗಳಿಗೆ, ಮೆಂಬರುಗಳ ಬೀಗರ ಮನೆಗಳಿಗೆ ಮೆಂಬರುಗಳಿಗೆ ಬೇಕಾದ ಮೆಂಬರುಗಳ ಮನೆಗಳಿಗೆ, ಹುಚ್ಚು ನಾಯಿಗಳಂತೆ ಅಲೆಯುತ್ತಿದ್ದೆವು. ಆಗುತ್ತೋ ಹೋಗುತ್ತೊ ಹೋದರೊಂದು ನಮಸ್ಕಾರ ಬಂದರೆ ಒಂದು ಸೀಟು, ಅಂತ ಹಲ್ ಹಲ್ ಕಿರೀತಾ ಹಾರಾಡುತ್ತಿದ್ದೆವು. ಹುಡುಗ, ಅದನ್ನ ತಪ್ಪಿಸಿದ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೆ? ಬಾಯೊಂದಿದ್ದರೆ, ಎಲ್ಲೋ ಹೇಗೋ ಬದುಕುತ್ತಾನೆ. ಇಂಟರ್ಮೀಡಿಯಟ್ ಪಾಸಾಗದೆ ಇರುವ ಮಹನೀಯರು ಇವತ್ತು ಎಂಥೆಂಥ ಪೀಠದಲ್ಲಿ ಕುಳಿತಿಲ್ಲ! ಸದ್ಯಃ, ಫೆಯಿಲಾಗಿ ನನ್ನ ಮಾನ ಉಳಿಸಿದ.

ಆ ಹುಡುಗಿ ಫೆಯಿಲಾದದ್ದು ನನಗೆ ಎಲ್ಲಕ್ಕಿಂತ ಅನುಕೂಲ. ಇನ್ನು ನಾನು ಗಂಡು ಹಡುಕಿ ಅವಳಿಗೆ ಮದುವೆ ಮಾಡಬಹುದು. ಇಂಟರ್ ಫೆಯಿಲಾದ ಇಸ್ಕೂಲ್ ಮೇಷ್ಟರಾದರೂ, ಬಹುಶಃ ಒಪ್ಪಬಹುದು. ಈ. ಪಿ. ಎಸ್ ಆಗಿ ಬಿಟ್ಟಿದ್ದರೆ, ಬಿ. ಎಸ್. ಸಿ. ಕೂಡ ಸಾಲದು ಅಂತ ಹಟ ಹಿಡೀತಿದ್ದಳು.

ಆ ಮೇಲೆ, ಈ ಹೀಚು. ಅದೂ, ಪರಮೇಶ್ವರನ ವರಪ್ರಸಾದದಿಂದ, ಫೆಯಿಲು. ಅದು ಇನ್ನು ಮುಂದಕ್ಕೆ ಹೈಸೂಲ್ ಸೇರಿ, ಕ್ರಿಕೆಟ್ ಆಟ ಕಲಿತು, ಮಸಾಲೆದೋಸೆ ತಿಂದು, ಹಿಂದಿ ಕಲಿತು ಸೈಗಲ್ ಹಾಡುಗಳನ್ನು ಗಟ್ಟಿಮಾಡಿ, ಕಾಲೇಜು ಹತ್ತಿ ಪೌಡರ್ ಹಚ್ಚಿ, ಕೊರಿಯಾ ಕಾರಲ್ ಮಾರ್ಕ್ಸ್ ಅಂತ ಕೂಗಿದರೆ ಏನು ಮಹಾ ಲಾಭ? ಇವನು ಹೈಸ್ಕೂಲಿಗೆ ಹೋಗದೆ ಇದ್ದದ್ದರಿಂದ ಸಿಗರೇಟ್ ಅಂಗಡಿಯವರಿಗೂ ಸಿನಿಮ ಮಾಲೀಕರಿಗೂ ಕೊಂಚ ನಷ್ಟವೇನೋ ಹೌದು. ಆದರೆ, ಅವರನ್ನ ಕಾರಲ್ಲಿ ಓಡಾಡಿಸುವ ಜವಾಬ್ದಾರಿ, ನನ್ನದೇನು? ಸಾಕು, ಅದಕ್ಕೆ, ಈಗ ಬಂದಿರುವಷ್ಟು ಕನ್ನಡ, ಇಂಗ್ಲೀಷು, ಪ್ರಕೃತಿ ಪಾಠ, ಆರೋಗ್ಯ, ನಾಗರಿಕತೆ, ಅಂಕಗಣಿತ....ಅಷ್ಟನ್ನ ಅರಗಿಸಿಕೊಳ್ಳಲಿ, ನಿಧಾನವಾಗಿ.

ಆರಾಮವಾಗಿ ನಾನು ನನ್ನ ಸಂಸಾರವನ್ನು ಸಾಗಿಸುತ್ತಿದೇನೆ. ದೇಶಾವರದ ನಗೆ ನನ್ನೊಬ್ಬನ ಮುಖದಲ್ಲಿ ಮಾತ್ರ ಇಲ್ಲ, ಈ ಊರಲ್ಲಿ. ಮಿಕ್ಕ ತಂದೆಗಳಿಗೆಲ್ಲ, ಹಾಳು, ಯಾವುದಾದರೂ ಒಂದು ಮಗು ಪಾಸಾಗೇ ಆಗಿಬಿಟ್ಟಿದೆ, ಗೋಳು.

—ಹೊ. ಚಂ. ಶಾಸ್ತ್ರೀ.

ಉಮೇದುವಾರರ ಹೇಳಿಕೆಗಳು

ಶ್ರೀ...............ಯವರು :—

ಅಧ್ಯಕ್ಷನಾಗಲು ಬೇಕಾದ ಯೋಗ್ಯತೆ ನನಗೇ ಇರುವುದು, ಎಂದು ಎಲ್ಲರೂ ಬಲ್ಲರು. ಆದರೂ, ಸ್ವಾರ್ಥನೋಡಿ, ಮನುಷ್ಯರದು! ತಾನೇ ಯೋಗ್ಯ, ತನಗೇ ಆ ಪದವಿ ದೊರೆಯ ತಕ್ಕದ್ದು, ಎಂದು ಪ್ರತಿಯೊಬ್ಬರೂ ಹಾರಾಡುತ್ತಿದಾರೆ. ಜನ, ಪಾಪ, ಕುರಿಮಂದೆ. ತೋಳ ಯಾವುದು, ಕುರುಬ ಯಾರು, ಎಂಬುದು ಅದಕ್ಕೆ ತಿಳಿಯದು.

ಶ್ರೀ...............ರು :—

ಬೇಡ ಎಂದವನನ್ನು ಬಲವಂತ ಪಡಿಸುವಕಾಲ ಇದು; ಈ ಸೀಸನ್‌ನಲ್ಲಿ ಮದುವೆ ಮಾಡಿಕೊಂಡವರನ್ನು ನೋಡಿ. ಇಲ್ಲದೆ ಇದ್ದರೆ, ರಾಜಾಜಿಗೆ ಆ ಪದವಿ ದೊರೆಯುತ್ತಿತ್ತೆ? ಆದ್ದರಿಂದ, ನಾನೂನೂ, ನನಗೆ ಬೇಕಿಲ್ಲ, ನಾನು ಖಂಡಿತ ಒಪ್ಪುವುದಿಲ್ಲ, ನನಗೆ ಸಾಕುಸಾಕಾಗಿ ಹೋಗಿದೆ, ಅಂತ ಆಟ ಹೂಡುತ್ತಾ ಇರುತ್ತೇನೆ. ಆಗಲಾದರೂ, ಈ ಜನ ದಾರಿಗೆ ಬಂದಾರೋ, ನೋಡಬೇಕು.

ಶ್ರೀ...............ಗಳು :—

ಈಗ ನಾನು, ನನಗೆ ಬೇಡ ಅಂದೆನೋ, ಅವನಿಗೆ ಕೊಟ್ಟು ಬಿಡುತ್ತಾರೆ. ಅವನು ಬಂದರೂ, ಅವನು ನಾನಿಲ್ಲದೆ, ನಿಭಾಯಿಸಲಾರ. ಅಂದಮೇಲೆ, ನಾನೇ ಇದ್ದರೆ, ಮೇಲಲ್ಲವೆ? ನನಗೆ ಗೊತ್ತಿರುವ ಹಾಗೆ, ಬೇರೊಬ್ಬನಿಗೂ ಈ ಅಧಿಕಾರ ನಡೆಸಲು ಧೈರ್ಯ ಇಲ್ಲ. ಆದರೆ, ಇದು ಅವನಿಗೆ ಗೊತ್ತಿಲ್ಲ....ಒಳ್ಳೇ ಪೀಕಲಾಟಕ್ಕೆ ಬಂತಲ್ಲಾ, ನನಗೆ!

ಶ್ರೀ...............ರವರು :—

ಅವರಿವರನ್ನ ಕೂರಿಸಿ, ಕುರ್ಚಿ ಭರ್ತಿಮಾಡೋಕಾಲ ಅಲ್ಲ ಇದು. ಆಧುನಿಕ ಪ್ರಪಂಚ ರಕ್ತ ತಿಕ್ತ ವಾತಾವರಣದಲ್ಲಿ ರಿಕ್ತತೆಯ ಕಡೆ ಸಾಗುತ್ತಿದೆ. ಇಂಥ ಸಂದಿಗ್ಧ ಸಮಯದಲ್ಲಿ, ಒಳ್ಳೇ ತಿಳಿವಳಿಕಸ್ಥನಿಂದಲೇ ಅಧ್ಯಕ್ಷತೆ ನಿರ್ವಹಿಸಲು ಸಾಧ್ಯ.

ನೋಡುತ್ತಾ ಇರಿ ನೀವು, ಇವರ ಆಟವೆಲ್ಲ ಮುಗಿಯಲಿ, ಊರು ಸಾಕಷ್ಟು ಹಾಳಾಗಲಿ, ಇವರ ಬೇಳೆಕಾಳು ಬೇಯ ಬೇಕಾದರೆ, ಕಡೆಗೆ ನನ್ನ ಬಾಗಿಲಿಗೆ ಬಂದು, ಬೊಮ್ಮಿಡಿ ಬಾರಿಸಿಯೇ ಬಾರಿಸುತ್ತಾರೆ.

ಶ್ರೀ................ನವರು:—

ಅಲ್ಲಾ! ಎಂಥ ಮಂಕರೂ ಈ ಜನರು! ಆ ನರೀನ ಒತ್ತಾಯ ಪಡಿಸುತ್ತಿದಾರೆ; ಈ ಕುರಿ ಹಿಂದೆ ಅಲೆಯುತ್ತಿದಾರೆ; ಆ ಗೋಮುಖ ವ್ಯಾಘ್ರದ ಬಾಲ ಹಿಡೀತಾರೆ. ನನ್ನ ವಿಷಯ ನಾನು ಹೇಳಿಕೊಳ್ಳಬಾರದು, ಸರಿ. ನನಗೇನು ಕಡಮೆ? ತೂಕವೆ? ತಲೆಯೆ?

ಶ್ರೀ............... :—

ಕಮ್ಯೂನಿಜಂ ಹಮ್ಮ್ಯೂನಿಜಂ ದೇಶದಲ್ಲಿ ಹರಡುತ್ತಿದೆ, ಅಂತ ಕೈ ಕೈ ಹಿಸುಕಿಕೊಂಡರೇನು ಬಂತು? ಅದಕ್ಕೆಲ್ಲ ಇವರೇ ಕಾರಣರು. ಈಗ, ಮುಸಲ, ನನಗೆ ಅಧ್ಯಕ್ಷ ಪೀಠ ಕೊಡಲಿಲ್ಲ, ಅನ್ನಿ....ನಾನು ಸುಮ್ಮನೆ ಮುಸುಕು ಹಾಕಿ ಕೂಡುತ್ತೇನೆಯೆ? ಹೋಗಿ ಸೇರುತ್ತೇನೆ ನಾನೂ ಕಮ್ಯೂನಿಸ್ಟ್ ಕಡೆ, ಬಿಡುತ್ತೇನೆಯೆ?

ಶ್ರೀ...............ಅವರು :—

ಇನ್ನೊಂದು ಸಲ ಕೂಡ ನನಗೆ ಕೊಟ್ಟುನೋಡಿ. ನನ್ನ ಕೆಲಸವೆಲ್ಲ ಅರ್ಧದಲ್ಲುಳಿದಿದೆ; ನಾ ನಿನ್ನೆಷ್ಟೋ ಮಾಡುವುದಿದೆ. ಕೈಗೆ ಬಂದದ್ದು ಬಾಯಿಗೆ ಬಂದಿಲ್ಲ; ಪ್ಲಾನೆಲ್ಲ ಪೂರ್ತಿಯಾಗಿಲ್ಲ, ಅನೇಕರ ನಿರುದ್ಯೋಗ ಸಮಸ್ಯೆ ಹಾಗೆಯೇ ಬಾಕಿ ಇದೆ; ಅನೇಕರ ಬಡತನ ನೀಗಿಲ್ಲ,....ಅಂತ ಎಷ್ಟೋ ಕೇಳಿಕೊಂಡೆ. ಆದರೂ, ಬೇರೊಬ್ಬ ನನ್ನ ಆರಿಸುತ್ತಾರಂತೆ....ಇರಲಿ! ನಾನು ಕೇಳಿಕೊಂಡು ಬಂದಷ್ಟು ನನಗೆ, ಅವನು ಕೊಟ್ಟು ಬಂದದ್ದು ಅವನಿಗೆ ದಕ್ಕುತ್ತೆ ...ಆದರೊಂದು, ಅವನೂ ಅಂಥ ಹರಿಶ್ಚಂದ್ರನೇನೂ ಅಲ್ಲ.

—ರೇವಣ್ಣ.

ಚಿರಂಜೀವಿಗೆ

ಚಿ|| ರಾಜನಿಗೆ ಆಶೀರ್ವಾದಗಳು.

ನೀನು ಹಾಸ್ಟಲ್ ಸೇರಿದಮೇಲೆ ಅಲ್ಲಿಂದ ಬರೆದ ಕಾಗದವನ್ನು ರಾಮಶೆಟ್ರು ನಿನ್ನೆ ತಲುಪಿಸಿದರು. ನಿನ್ನ ರೂಮಲ್ಲಿ ನೀನಲ್ಲದೆ, ಬೇರೊಬ್ಬನು ಇದಾನೆ ಎಂದು ಬರೆದಿರುವುದರಿಂದ ನಮಗೆಲ್ಲ ತುಂಬ ಯೋಚನೆಯಾಗಿದೆ. ನಿನ್ನ ವಿಷಯ ಅವನು ಮೇಷ್ಟರುಗಳ ಸಮಕ್ಷಮ ಚಾಡಿ ಹೇಳದೆ ನೋಡಿಕೊಳ್ಳಬೇಕಾದದ್ದು ನಿನ್ನ ಕೆಲಸ. ಆ ಹುಡುಗ ಯಾವ ಊರು, ಯಾವ ಜಾತಿ ಎಂಥ ಮನೆತನ, ಬಡವನೆ, ನಮಗಿಂತ ಶ್ರೀಮಂತನೇ ತಿಳಿಸು, ಬಡವನಾದರೆ, ನೀನು ನಿನ್ನ ಪೆಟ್ಟಿಗೆಗೆ ಸದಾ ಬೀಗ ಹಾಕಿರ ಬೇಕಾದದ್ದು ಅತ್ಯವಶ್ಯಕ. ಜಾತಿ ವಿಚಾರಕೂಡ, ಈಗಿನ ವಾತಾವರಣದಲ್ಲಿ ಬಹು ಮುಖ್ಯ ವೆಂದು ನಿನಗೆ ನಾನು ಹೇಳಬೇಕಾಗಿಲ್ಲ. ಮತ್ತೊಂದು ವಿಷಯ ಅವನಿಗೆ ಕಜ್ಜಿ, ಉಬ್ಬಸ, ಕ್ಷಯ, ಇತ್ಯಾದಿ ರೋಗಗಳಿವೆಯೆ? ಇತ್ತೆ? ವಿಚಾರಿಸಿ ಬರಿ. ಕೂಡಲೇ, ವಾರ್ಡನಿಗೂ ತಿಳಿಸು. ಇಲ್ಲಿಂದ ತೆಗೆದುಕೊಂಡುಹೋದ ಕಷಾಯವನ್ನು ನೀನೂ ಮರೆಯದೆ ಸೇವಿಸು; ನಿನ್ನ ಕೆಮ್ಮಲು ಈಗ ಹೇಗಿದೆ?

ಸ್ಕಾಲರ್ಷಿಪ್ ಇತ್ಯಾದಿ ತೀರ್ಮಾನವಾಗುವವರೆಗೂ ನಾವು ಇಲ್ಲಿಂದ ನಿನ್ನ ಬೈಸಿಕಲ್ಲನ್ನು ಕಳುಹಿಸುವುದಿಲ್ಲ, ನೆನಪಿರಲಿ. ನಿನ್ನ ಹೊಸ ಉಲ್ಲನ್ ಅಂಗಿ, ಸ್ವೆಟ್ಟರ್ ಮುಂತಾದವುಗಳೂ ಅಲ್ಲಿಯ ತನಕ ಇಲ್ಲೇ ಇರಲಿ. ನಿನ್ನ ರೂಮಲ್ಲಿರುವವನಿಗೆ ನೀನು ಯಾವುದೂ ನಮ್ಮ ಆಸ್ತಿಪಾಸ್ತಿ ವಿಚಾರ ಬಹಿರಂಗ ಪಡಿಸಬೇಡ. ಹೋಟಲು ಗೀಟಲುಗಳಲ್ಲಿ ಅವನೇ ಇಬ್ಬರ ಬಿಲ್ಲನ್ನೂ ಕೊಡುತ್ತ ಬರಲಿ. ನಿನಗೆ ಹಣ ಬೇಕಾದ ಹಾಗೆಲ್ಲ, ಕೊಡಲು, ಶೆಟ್ಟರಿಗೆ ಏರ್ಪಾಟು ಮಾಡಿದೇನೆ.

ಸಿನಿಮಾಗೆ ಹೋಗದೆ, ನಿನಗೆ ಮನ ನೆಮ್ಮದಿ ಇಲ್ಲವೆಂದರೆ, ಅಲ್ಲಿಯ ವಿದ್ಯಾರ್ಥಿ ಸ್ನೇಹಿತರೊಂದಿಗೆ ಹೋಗಬೇಡ. ಶೆಟ್ಟರ ಭಾವಮೈದುನನ ಜೊತೆಗೆ ಹೋಗು. ಆಮೇಲೆ, ಇನ್ನೊಂದು ಸಂಗತಿ. ಮೇಷ್ಟರುಗಳ ಕೂಡ ನೀನು ಎಂದಿಗೂ ಇಸ್ಪೀ ಟಾಟಕ್ಕೆ ಕೂರಬಾರದು. ಅವರು ಪೂಜ್ಯ ಗುರುಗಳು, ದೇವರ ಸಮಾನ, ನಿನ್ನ ಮಾತಾ ಪಿತೃಗಳಾದ ನಂತರ, ಅವರೇ ಮೂರನೆಯವರು. ಅಜ್ಞಾನವೆಂಬ ತಿಮಿರಕ್ಕೆ ಅಂಜನ ಹಾಕುವ ವೈದ್ಯರು, ನನ್ನ ಕೂಡ ನೀನು ಇಸ್ಪೀಟ್ ಆಡುತ್ತಿಯೇನು? ಅದ್ದ


ರಿಂದ, ಇತರೇ ಹುಡುಗರಂತೆ, ನೀನು ಅವರೆದುರು ಅವರಿಂದಲೇ ಸಿಗರೇಟ್ ಪಡೆದು ಬೀಡಿ ವಗೈರೆ ಸೇದಬಾರದು; ಅವರ ಮುಗ್ಗುಲಲ್ಲಿ ಕೂತು, ಅವರು ಕರೆದರೂ ಇಸ್ಪ ತ್ರೆಂಟಾಡಬಾರದು. ಹಾಗೆ ಮಾಡಿದರೆ, ಖಂಡಿತ ನೀನು ಉದ್ಧಾರ ಆಗುವುದಿಲ್ಲ. ಇಸ್ಪೀಟ್ ಆಡಬೇಕಾದರೆ, ಶನಿವಾರ ಭಾನುವಾರ ಶೆಟ್ಟರ ಮನೆಗೆಹೋಗು; ನನ್ನ ಅಭ್ಯಂತರವೇನೂ ಇಲ್ಲ. ಅಲ್ಲೂ ಒಂದು ಪಾರ್ಟಿಸೇರುತ್ತದಂತೆ.

ಊಟ ಮಾಡಿದ ತಕ್ಷಣ ನೀನು ಸ್ಕೂಲಿಗೆ ಹೋಗ ಬೇಕಾಗಿರುವುದರಿಂದ, ಅಲ್ಲಿ ನಿನಗೆ ನಿದ್ದೆ ಹತ್ತುತ್ತೆ ಅಂತ ಬರೆದಿದಿಯಾ....ಸರಿ! ನನಗೂ ಹಾಗೆಯೆ. ಊಟ ಆದ ಕೂಡಲೇ ಎರಡು ತಾಸು ಕಣ್ಣು ಮುಚ್ಚಲೇಬೇಕು, ಆದರೆ ಒಂದು ಪರಿಹಾರ ಮಾಡೋಣ....ಪ್ರತಿ ವಿಷಯಕ್ಕೂ, ಇದ್ದದ್ದರಲ್ಲಿ ಬುದ್ಧಿವಂತರಾದ ಮೇಷ್ಟ್ರುಗಳ ಕೈಯಿಂದ ಟ್ಯೂಷನ್ ಮಡಗೋಣ, ನವರಾತ್ರಿ ಕಳೆಯುತ್ತಲೂ. ಟ್ಯೂಷನ್ ಹೇಳಿ ಪಾಸು ಮಾಡುವುದರಲ್ಲಿ ನಿನ್ನ ಮೇಷ್ಟ್ರುಗಳ ಪೈಕಿ ಯಾರು ಜಾಣರು ಅಂತ ನಿನ್ನ ಸ್ನೇಹಿತರನ್ನು ವಿಚಾರಿಸಿ ಬರೆ. ಅವರ ರೇಟುಗಳು ಎಷ್ಟು ಅಂತಲೂ ತಿಳಿದುಕೋ· ಅಡ್ವಾನ್ಸ್ ಇತ್ಯಾದಿ ಎಷ್ಟು ಹಣಬೇಕು ಎಂಬುದನ್ನೂ ಲೆಕ್ಕಹಾಕು. ನವರಾತ್ರಿ ಆದಮೇಲೆ, ನಾನೂ ನೀನು ಹೋಗಿ, ಚೌಕಾಶಿಮಾಡಿ. ನೇಮಿಸಿಕೊಳ್ಳೋಣ. ಕಳ್ಳ ಕೆಲಸ ಮಾಡುವವರೊಬ್ಬರೂ ಬೇಡ ನನಗೆ. ಖಾತ್ರಿಯಾಗಿ, ಕೊಟ್ಟಕಾಸಿಗೆ ತಕ್ಕಂತೆ, ದುಡಿಯುವ ಮೇಷ್ಟ್ರುಗಳನ್ನೇ ಗೊತ್ತು ಹಚ್ಚಬೇಕು.

ಇಲ್ಲಿ ನಾವೆಲ್ಲರೂ ಕ್ಷೇಮ. ಬೆಂಗಳೂರು ರೇಸಿಗೆ ಹೋದಾಗ, ನಾನು ನಿನ್ನ ಎಡ್ಮೇಷ್ಟ್ರನ್ನು ಕಂಡಿದ್ದೆ. ಅವರು ಮಾತನಾಡಿದರು; ಆದರೆ, ನಾನು ನಿನ್ನ ಸುದ್ದಿ ಎತ್ತಲಿಲ್ಲ.

ಇತಿ ಆಶೀರ್ವಾದ ಪೂರ್ವಕ

ಅಣ್ಣ.



ಅಮೃತ—ವಿಷ

(ಮದ್ರಾಸಿನಲ್ಲಿ ರೇಷನ್ ಹೊರಟುಹೋಯಿತೆಂದು ಕೇಳಿದಾಗ :—)

ಪ್ರಗತಿಪರನವಯುವಕ—ಮದರಾಸಿನಲ್ಲಿ ರೇಷನ್ ತೆಗೆದು ಹಾಕಿಬಿಟ್ಟರಂತೆ; ಹಿಪ್ ಹಿಪ್ ಹುರ್‍ರೇ ಚಕ್ರವರ್ತಿಜೀ!....ನಮ್ಮ ನಾಡಿಗೂ ಶೀಘ್ರದಲ್ಲೇ ಆ ಸುದಿನ ಸಂಧಿಸುವುದಲ್ಲವೇ! ಆಹಾ! ಜನರೆಲ್ಲರು ಕಾರ್ಡು, ಕ್ಯೂ, ಕಲ್ಲಕ್ಕಿ, ಕುದುರೆಭೋಗದ ಕಾರ್ಪಣ್ಯವಿಲ್ಲದೆ, ಹೊಟ್ಟೆತುಂಬ ಉಂಡು ನಲಿಯುವ ಸುಯೋಗ ಸಮೀಪದಲ್ಲೇ ಇದೆ!

ಮನೆಯೊಡತಿ—ಹಾ! ಹೋಗಿಬಿಡುತ್ತೆಯೇ ರೇಷನ್ನು! ಕೊಡೋದೇ ಇಷ್ಟು ಅಂತ, ನಿರಕಾಗಿ ತಂದುಹಾಕಿ ಹಾಯ್ ಆಗಿ ಇರ್ತಿದ್ದೆನಲ್ಲಪ್ಪ ಇಷ್ಟುದಿನ! ಇನ್ನು ಮೇಲೆ ಮೂರು ದಿನಕ್ಕೊಂದುಸಾರಿ ಅಕ್ಕೀ ಡಬ್ಬ ಖಾಲೀಮಾಡಿ ಮುಂದೆ ತಂದು ಹಿಡೀತಾಳಲ್ಲಾ!

ನೆರೆಯಾಕೆ—ಅಯ್ಯೋ ಇನ್ನೇನುಗತಿಯೋಮ್ಮ! ರೇಷನ್ ಹೋಗಿ ಬಿಡ ತ್ತಂತೆ. ಈ ಹಾಳು ಬೆಂಗ್ಳೂರುಪೇಟೇಲಿ ಸೇರಿಕೊಂಡು, ನಂಟರಕಾಟ ಸಾಕಾಗಿ ಹೋಗುತಿತ್ತು ಮೊದಲಿಗೆ. ಸಧ್ಯ ರೇಷನ್ ಬಂದಾಗನಿಂದ ಆ ದಿಗಿಲಿಗಾದರೂ ನಿಮ್ಮಪ್ಪನ ಕಾಗಿ ಬಳಗ ಬರುತ್ತಿರಲಿಲ್ಲ. ಇನ್ನು ಯಥಾ ಪ್ರಕಾರವೇ!....ಅದರಲ್ಲೂ ನಾದಿನಿ ನಾಗೂ ಅಂತೂ ಅರ್ಧ ಡಜ಼ನ್ ಮಕ್ಕಳಸಹಿತ ವರ್ಷಕ್ಕೆ ಒಂಭತ್ತು ತಿಂಗಳೂ ಇಪ್ಪತ್ತು ದಿನ ನಮ್ಮನೇಲೇ ಕ್ಯಾಂಪ್ ಮಾಡಿಬಿಡ್ತಾಳೆ!

ಭತ್ತದ ಬೆಳೆ ಬರುವರಾಯರು—ಅರರೇ! ಇನ್ನೂ ಒಂದಾರು ತಿಂಗಳಾ ದರೂ ರೇಷನ್ ಇದ್ದುಬಿಟ್ಟರೆ ಸಾಕಲ್ಲಾ! ಕಟ್ಟುತ್ತಿರೋ ಮನೆ ಪೂರ್ತಿ ಮಾಡಿ ಬಿಡುತ್ತೇನೆ....ಏನೋ ...ನಾಲ್ಕು ಜನದ ಹೆಸರು ಹೆಚ್ಚಿಗೆ ಸೇರಿಸಿಕೊಟ್ಟು....ಹಿತ್ತಿಲ ಬಾಗಿಲ ವ್ಯಾಪಾರದಿಂದ ತಕ್ಕಮಟ್ಟಿಗೆ ಜಮಾಯಿಸಿದೆ. ಮನೆ ಕಾಮಗಾರಿ ಕಂಪ್ಲೀಟ್ ಆಗೋತನಕ ರೇಷನ್ ಇದ್ದುಬಿಟ್ಟರೆ, ಗರುಡೋತ್ಸವ ಮಾಡಿಸ್ತೇನೆ ತಿರುಪತೀ ತಿಮ್ಮಪ್ಪನಿಗೆ!

ಧರ್ಮಪ್ರಕಾಶ ಧನಕೋಟಿ ಶೆಟ್ರು—ಏನು ಅನ್ಯಾಯವಯ್ಯಾ!.... ಸಮ್ಮುಲಂತ ಪೋತುನ್ನದೇ!.... ನಾ ಬ್ಲಾಕ್ ಪನೀಕಿ ಗತಿಯೇವಿ! ಕೋದಂಡರಾಮಾ!

ಬಾದರಾಯಣ ಸಂಬಂಧದ ಸೋದರತ್ತೆ—ಹಿ ಹಿ ಹಿ ಹಿ! ಹೋಗತ್ತಂತೆ ಹಾಳ್ ರೇಷನ್ನು ಸಧ್ಯಕ್ಕೆ! ಇನ್ನುಮೇಲೆ ಈ ಚಿನಾಲಿ ಲೆಖ್ಖಾಚಾರವಾಗಿ ಅಕ್ಕಿ ಹಾಕಿ ನನ್ನ ಕೈಲಿ ಅಡಿಗೇ ಮಾಡಿಸಿಕೊಳ್ಳೋಹಾಗಿಲ್ಲ! ನನ್ನ ಸರ್ವಸಾಧಾರಣದ ಊಟ—ಒಂದೂ ಮುಕ್ಕಾಲು ಪಾವಕ್ಕೇದು—ನಾನು ಮಾಡಬಹುದು ಇನ್ನು ಮೇಲೆ! ಹಿ ಹಿ ಹಿ ಹಿ!

* * *

ಒಬ್ಬರಿಗೆ ಅಮೃತವಾದ್ದು ಮತ್ತೊಬ್ಬರಿಗೆ ವಿಷ ಅಲ್ಲವೇ?

—ಸುನಂದಮ್ಮ.

—o—



ಕಂಡದ್ದನ್ನು ಕಂಡಹಾಗೆ ತೋರಿದರೆ
ಕೆಂಡದಂಥಾ ಕೋಪ!

ನೀರಲ್ಲಿ ಹೋಮ

೨೭೯,

ಆರಡಿ ಉದ್ದ, ನಲವತ್ತ್ರೆದೆಯು, ಹದಿನಾರಂಗುಲ ಸುತ್ತಿನ ಕತ್ತು!
ಪೋಲೀಸಪ್ಪನು ಮಾಡಿದ ಡ್ಯೂಟಿ,
ಕತ್ತಲೆ ಹೊತ್ತಲಿ ಬೀಟನು ತಿರುಗಿದ.
ಬಾಯಲಿ ಕ್ರಿಮಿನಲ್ ಕೋಡಿಣ ಪಠಣ, ತಲೆಯಲಿ ಎವಿಡೆನ್ಸ್ ಸಾಕ್ಷಿನ ಮನನ
ಎದೆಯಲಿ ಪೋಲೀಸಾಕ್ಟಿನ ತನನ,
ಕಳ್ಳರ ಜಾಡನು ತಡಕುತ ನಡೆದನು.
"ಕೇಸನು ದಾಖಲು ಮಾಡುವ ಕೋರ್ಟಲಿ
ಕೀರ್ತಿಯನೇರಿಸಿ ಹೆಸರನುಗಳಿಸಿ, ಮ್ಯಾಜಿಸ್ಟ್ರೇಟರ ಮೆಚ್ಚುಗೆ ಪಡೆದು
ಏ.ಎಸ್.ಪೀಗಳ ಕೈಯನು ಕುಲುಕಿ ಡೀ.ಎಸ್.ಪೀ. ಯಿಂ ಬೆನ್ನನು ತಟ್ಟಿಸಿ
ಹೆಚ್.ಸಿ. ಆಗಲು ಹವಣಿಸಿದ.
ಏಕೆನೆ? ಅಲ್ಲೇ ಇರುವುದು ಐಬೊಂದು.

* * *

೨೭೯ ಗೆ

ಪ್ರೇಯಸಿ ಇದ್ದಳು, ಹರೆಯದ ಚೆಲುವೆ
ಚಿನ್ನದ ಪುತ್ಥಳಿ, ಎಲ್ಲೆಸ್ ಪಾಸಿನ ಲಲ್ಲೆಯ ಹುಡುಗಿ
ಸಿನಿಮಾ ಸ್ಟಾರೆಂದೆನಿಸುತ್ತಿರುವಾ ಕಾಂಚನಮಾಲೆಯ ಹೋಲಿಕೆ ಕೊಂಚ.
ಆದರೆ, ಹುಡುಗಿಗೆ ಜಂಬವೊ, ಜಂಬ!
ಪೀ.ಸೀ. ಗ್ರೇಡಿನ ಗಂಡನು ಸಾಲದು, ಹೆಚ್.ಸಿ. ಆದರು ಬೇಕೇಬೇಕು.
ರೇಯಾನ್ ಸೀರೆ ನೈಲಾನ್ ಕುಪ್ಪಸ, ಸಿನಿಮಾ ನೋಡಲು ಮೇಗಡೆ ಪಾಸು,
ಹೆಚ್.ಸೀ. ಗಲ್ಲದೆ, ಪೀ ಸೀ. ಗುಂಟೆ ?

* * *

೨೭೯, ಹೇಳಿದನವಳಿಗೆ

ಹೆಚ್.ಸೀ. ಆಗಲು, ಹಾಳೀ ಊರಲಿ ಕಳ್ಳರೆನಾಸ್ತಿ, ಕನ್ನವೆ ಇಲ್ಲ,
ಬಡಿದಾಟಗಳೋ ಗಗನದ ಕುಸುಮ, ಎಮ್ಮೆ ನಗಣಿಯ ಮಿದು ಎದೆ ಜನರಿಗೆ
ಖೂನೀಮಾಡಲು ಛಾತಿಯೆ ಇಲ್ಲ.
ಕಿಸೆಯಲಿ ಹಸ್ತವ ನಿಳಿಸುತ ಬೇಗನೆ ಪರ್ಸನು ಕದಿಯುವ ಕಲೆಗಾರ
ಒಬ್ಬನ ಕಾಣೆನು ಸಂತೆಯಲಿ; ಪಿತ್ತಿನ ಗುಂಡಿಗೆ, ಪೀಪಲಿಗೆ!

*　　　*　　　*

ಅದಕೇನೆಂದಳು, ಪ್ರೇಯಸಿ, ಬಲ್ಲಿರಾ?

....

ಸೋದರಮಾವನ ಸೈಕಿಲ್ಲಾಂಪಿಗೆ ನೀರನು ತುಂಬುವೆ ಎಣ್ಣೆಯಬದಲು
ಹಿಡಿಯಿರಿ, ಅವರನು, ಕೇಸೊಂದಾಯಿತು, ಸುಲಭದಿ ನಿಮಗೆ
ಹಸುವಿನ ಹಗ್ಗವ ಸಡಲಿಸಿ ಬಿಡುವೆನು ನೆರೆಮನೆ ತೋಟಕೆ
ಹಿಡಿಯಿರಿ ಹಾಕಿರಿ, ಕೇಸನು ಧೈರ್ಯದಿ
ತಂಗಿಗೆ ಕೊಡುವೆನು ಸುರ್ ಸುರ್ ಬತ್ತಿ
ಅವಳದ ಹಚ್ಚುತ ಎಸೆವಳು ಪೆದ್ದಿ, ನೆರೆಮನೆ ಕೊಟ್ಟಿಗೆ ಸುಟ್ಟೇ ಪೋಪುದು,
ಎಳೆಯಿರಿ, ಕೋರ್ಟಿಗೆ, ಹುಡುಗಿಯ, ಲೀಗಲಿ,—
ಬೀಳಲಿ ನಾಲ್ಕೇಟೇನಂತೆ ?
ಅಂಗಡಿ ಪೆನ್ನನು ತುರುಕುವೆ ಕಿಸೆಯಲಿ
ತಮ್ಮನ ಕೋಟಿನ ಬಲಗಡೆ.
ಕಳಿಸಿರಿ, ತುಂಟನ, ಜೈಲಿಗೆ ಬೇಗನೆ.
ಈಪರಿ ನಾನೇ ಕೇಸುಗಳೊದಗಿಸೆ, ಬಂದೇ ಬರುವುದು, ಹೆಚ್.ಸೀ. ಗ್ರೇಡು.

*　　　*　　　*

ಇನ್ನೂ ರೆಪ್ಪತ್ತೊಂಬತ್ತು
ಹೆಚ್.ಸಿ. ಆದನು ತಿಂಗಳು ಮೂರಲಿ!

....

ಆದರೆ, ಅವನಿಗೆ ಇನ್ನೂ ಆಸೆ!....ಮದುವೆಯ ಮಾತನು ಎತ್ತಲೆ ಇಲ್ಲ.
" ಹೀಗೆ ಇನ್ನೂ ನಂತರ ಕೈಯಲಿ ತಪ್ಪುಗಳನ್ನೇ ನಡೆಸೇ, ಡಾರ್ಲಿಂಗ್ !
ಎಂಟ್ಹತ್ತಾದರೂ ಬಂದರೆ ಬೇಗದಿ, ಎಸ್ಪೈ ಆಗುವೆ, ಲಗ್ನವದಾಗುವೆ!"

ಎಂದನು ನಾಚಿಕೆ ಗೀಚಿಕೆ ಇಲ್ಲದೆ
ಆರಡಿ ಉದ್ದದ ಹೆಚ್. ಸೀ. ಭಂಡ.


*　　　　*　　　　*

ಛೀ! ಥೂ! ಎಂದಳು, ಚಿನ್ನದ ಪುತ್ಥಳಿ
ನೀರಲಿ ಹೋಮವ ಮಾಡಿದೆನಲ್ಲಾ, ನಂಟರನೆಲ್ಲ, ಎನ್ನುತ ರೇಗಿ,
ಊರಿನ ಪ್ರೈಮರಿ ಶಾಲೆಯ ಮಾಸ್ತರ ಕೊರಳಲಿ
ಮಾಲೆಯ ಹಾಕಿದಳಾ ಚೆಲುವೆ
ಸ್ಟೇಷನ್ ಮುಂದೆಯೆ ವಾಕಿಂಗ್ ಹೋದಳು.
೨೭೯ ನೋಡಿದ: ನೇಣನು ಬಿಗಿದನು ಕುತ್ತಿಗೆಗೆ....

....

ಪೋಲೀಸ್ ಪಡೆಯಲಿ ನೇಕನ್ ಸಿ!

—ನಾ. ಕ.



" ಆ ಕಾಲೇಜು ಜೀವನ ನೆನೆಸಿಕೊಂಡರೆ, ಯಾಕಾದರೂ
ಇಷ್ಟು ಬೇಗ ಪಾಸಾದೆನೋ, ಅನ್ನಿಸುತ್ತೆ!"

ಬಹಿರಂಗ ಪತ್ರ

ಸ್ವಾಮಿ ಸಂಪಾದಕರೇ!

ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಈ ಸುದ್ದಿಯನ್ನು ಪ್ರಚುರ ಪಡಿಸಿದರೆ ನಮ್ಮ ಉದ್ಯಮ ಯಶಸ್ವಿಯಾದ ಮೇಲೆ ನಿಮ್ಮ ಬಾಯಿಗೂ ಎರಡು ಅಕ್ಕೀಕಾಳು ಹಾಕುತ್ತೇವೆ ಎಂದು ಮಾತು ಕೊಡುತ್ತೇನೆ.

ಇತ್ತೀಚೆಗೆ ಆಹಾರ ಹತೋಟಿ ರದ್ದಾಯಿತಲ್ಲವೇ? ನೆರೆ ಪ್ರಾಂತ್ಯದಲ್ಲಿ— ಅಂತಃಕರಣದ ಅನುಸಾರವಾಗಿ ರಾಜಾಜಿಯವರು ದೊಡ್ಡಹೆಜ್ಜೆ ಮುಂದಿಟ್ಟರಲ್ಲವೇ? ಅಂದಮೇಲೆ ಅದೇ ಕಾವೇರಿ ನೀರನ್ನು ಮೊದಲು ಕುಡಿಯುವ ನಾವು ಸುಮ್ಮನಿರಲಾದೀತೆ. ಅಂದರೆ ನಮ್ಮಲ್ಲೂ ಆಹಾರ ರದ್ಧತಿ ಸ್ವತಃ ಸಿದ್ಧ. ಹಾಗೆಂದರೆ ಜನತೆಗೆ ಹೇಗಾರೂ ಇರಲಿ. ಆ ಇಲಾಖೆಯಲ್ಲಿ ಕೆಲಸ ಮಾಡುವ ನಮ್ಮಂತಹ ಸುಮಾರು ಸಾವಿರ ನೌಕರರಿಗೆ ತಕ್ಷಣ ಬಾಯಿಗೆ ಮಣ್ಣು ಬೀಳುವುದು. ನಮಗೆಲ್ಲಾ ಬೇರೆ ಬೇರೆಕಡೆ ಉದ್ಯೋಗ ದೊರಕಿ ನಾವು ಜೀವನ ಸಂಪಾದಿಸುವ ಹಾಗಾಗ ಬೇಕಾದರೆ ಯುದ್ಧ ಬರಲೇಬೇಕು. ನಮ್ಮಲ್ಲಿ ಅರ್ಧಕರ್ಧ ಜನ ಮಡಿಯಲೇಬೇಕು.

ಅದಕ್ಕಿಂತ, ಸ್ವಯಮೇವ ಮೃಗೇಂದ್ರತಾ ಎನ್ನುವ ಹಿರಿಯೋಕ್ತಿಯಂತೆ. ಆಹಾರ ಇಲಾಖೆಯಿಂದ ವಜಾ ಮಾಡಲ್ಪಡ ಬಹುದಾದ ನಾವು ಸಾವಿರ ಜನ ಈಗಿನಿಂದಲೇ ಒಂದು ಸಂಘವನ್ನೇರ್ಪಡಿಸಿ, ಇಷ್ಟುದಿನ ಕಂಟ್ರೋಲ್ ಕೃಪೆಯಿಂದ ನೆಮ್ಮದಿಯಾಗಿ ಬಾಳಿದಂತೆ, ಇನ್ನು ಮೇಲೂ ಬಾಳಲು ಮಾರ್ಗಗಳನ್ನು ಕಂಡು ಹಿಡಿಯಬೇಕು. ಹಾಗೂ ಅನುಸರಿಸಬೇಕು.

ನಮ್ಮಲ್ಲಿ ಹಲವಾರು ಜನರಿಗೆ ೮ ಸೇರು ಅಕ್ಕಿಯನ್ನು ಹತ್ತು ಸೇರು ಮಾಡಲು ಬರುತ್ತೆ. ಹತ್ತು ಸೇರು ಅಕ್ಕಿಯನ್ನು ಹನ್ನೊಂದರಂತೆ ಅಳೆಯಲು ಬರುತ್ತೆ. ಇಂತಹಾ ಗುದಾಮುಗಳಲ್ಲಿ ಇಷ್ಟು ಸೇರು ಭತ್ತ ಹೆಗ್ಗಣಗಳ ಪಾಲು. ಅದಕ್ಕೆ ಸಾಕಷ್ಟು ನಿದರ್ಶನ. ಸಾಕ್ಷಿ ಎಲ್ಲವನ್ನೂ ಎರಡೇ ನಿಮಿಷಗಳಲ್ಲಿ ಲೆಕ್ಕ ಹೇಳುವ ಚಾಣಕ್ಯರಿದ್ದಾರೆ. ಭತ್ತವನ್ನೇ ಬೇಳೆ ಎಂದು ಮಾಡುವ ಕೆಚ್ಚೆದೆಯರೂ ಇದ್ದಾರೆ. ಮೂಟೆಗೆ ಗಾಯ ಆಗದ ಹಾಗೆ ಬತ್ತವನ್ನೆಲ್ಲಾ ತೆಗೆದು ಹೊಟ್ಟೆ ತುಂಬುವ ಜಾಣ್ಮೆಯರೂ ಇದ್ದಾರೆ.

ನಾವೆಲ್ಲರೂ ಸುಸಂಘಟಿತರಾಗಿ, ಇನ್ನು ಮುಂದೆ ಅಕ್ಕಿ ಭತ್ತ ವ್ಯಾಪಾರಮಾಡುವ ಶ್ರೀಮಂತರಿಗೆ ನಮ್ಮ ಸಹಕಾರವನ್ನು ಕೊಟ್ಟು ನಮ್ಮ ಅಭ್ಯುದಯಕ್ಕೆ ನಾವೇ ತಳಹದಿ ಹಾಕಿಕೊಳ್ಳಬೇಕಾಗಿದೆ.

ಆದಕಾರಣ ಈ ಪತ್ರವನ್ನು ಓದಿದ ನಮ್ಮವರೆಲ್ಲರೂ ಊರಾಚಿನ ಮಾರಮ್ಮನ ಗುಡಿ ಮೈದಾನದಲ್ಲಿ ಭಾನುವಾರ ಸಂಜೆ ೪-೩೦ ಗಂಟೆಗೆ ಸರಿಯಾಗಿ ಸಲ್ಲುವ ಈ ಕೆಲಸಕ್ಕೆ ಶುಭ ರಾಹುಕಾಲದಲ್ಲಿ ಸಭೆ ಸೇರಬೇಕೆಂದು ಈ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ.

ಸರಕಾರಕ್ಕೆ ಕಾಣದ ಹಾಗೆ ಹಣ ಸಂಪಾದಿಸಿದ ಹಲವಾರು ಶ್ರೀಮಂತರು, ಹತ್ತೋಟ ರದ್ದಾದಕಾರಣ ಅಕ್ಕಿ ವ್ಯಾಪಾರಕ್ಕೆ ತೊಡಗೋಣ ಎಂದು ಯೋಚಿಸುತ್ತಿದ್ದಾರೆ. ಆದರೆ ಅವರುಗಳಿಗೆ ಈ ವ್ಯಾಪಾರದ ಅ.ಬ.ಕ. ಗಳೂ ಗೊತ್ತಿಲ್ಲ. ಅಂತ ಅವರಹಿಂದೆ ನಮ್ಮವರೊಬ್ಬೊಬ್ಬರು ಕುಮ್ಮಕ್ಕುಕೊಡಸಿಂತರೆ. ಉಭಯ ತಾಪಿ ಅನುಕೂಲ. ಅಂತಹ ಶ್ರೀಮಂತರಿಗೂ ಅಲಾಯಿದಾ, ಆಹ್ವಾನ ಕೊಟ್ಟಿದ್ದೇನೆ. ಸುಮಾರು ಐವತ್ತು ಜನ ಅಂತಹವರು ಸಭೆಗೆ ಬರುವ ನಿರೀಕ್ಷೆ ಇದೆ.

ಡಿ. ಸಭೆಯಲ್ಲಿ ನಡೆದ ವಿಷಯಗಳೆಲ್ಲಾ ಸದ್ಯಕ್ಕೆ ಗೋಪ್ಯವಾಗಿರುತ್ತೆ.

ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿಲ್ಲ ಎಂದು ನಮ್ರವಾಗಿ ತಿಳಿಸ ಬಯಸುತ್ತೇನೆ. ಸಭೆಯಲ್ಲಿ ಉಪಾಹಾರದ ಏರ್ಪಾಡು ಏನೊಂದೂ ಇಲ್ಲ ಎಂದು ಮುನ್ಸೂಚನೆ ಕೊಡುತ್ತಿದ್ದೇನೆ.

ಇತಿ ನಿಮ್ಮ ಸಹಕಾರವನ್ನು ಬಯಸುವ,
ತಂಡುಲಾರ್ಯ.
ನಿರ್ವಾಹಕ.

O

ಸತ್ಯ-ಅಹಿಂಸೆ-ಬ್ರಹ್ಮಚರ್ಯ !

......ವಿದ್ಯಾರ್ಥಿ ಬಂಧುಗಳೆ! ಮತ್ತೆ ಮತ್ತೆ ಬಿತ್ತಿ ಹೇಳುತ್ತೇನೆ—ಸತ್ಯ, ಅಹಿಂಸೆ, ಬ್ರಹ್ಮಚರ್ಯ—ಇವೇ ನಮ್ಮ ಜನಾಂಗವನ್ನು ಕಾಪಾಡಬೇಕು........

Hear, hear.

ಆದ್ದರಿಂದ, ಕಿರಿಯರೆ, ತಾವೆಲ್ಲರೂ ಈ ವ್ರತವನ್ನಾಚರಿಸುವ ದೀಕ್ಷೆ ತೊಡಬೇಕು. ಸತ್ಯ ...ಅಹಿಂಸೆ ...ಬ್ರಹ್ಮಚರ್ಯ ! ಬಿತ್ತಿ ಹೇಳುತ್ತೇನೆ, 'ಬ್ರಹ್ಮಚರ್ಯ!'

Hear, hear

ಮುಂದೆ ತಮ್ಮ ಮಕ್ಕಳು ಮರಿಗಳಿಗೂ ಅದೇ ದೀಕ್ಷೆಯನ್ನು ತೊಡಿಸಬೇಕು.

Hear, hear........(ಪ್ರಚಂಡ ಕರತಾಡನ)

—ರಾಮಕೃಷ್ಣ.

ದ್ರೌಪದೀ ನೃತ್ಯ-ಪಾಠ

ನೃತ್ಯಮಾಡ ಬಯಸುವ ಕಲಾವಿದ, ಸೀರೆಯನ್ನು ಸೊಂಟಕ್ಕೆ ಕಟ್ಟಿಕೊಂಡು, ಟೋಫನನ್ನು ಬಾಚಿ, ತಲೆಯ ತುತ್ತತುದಿಯ ಮೇಲೆ, ಗೋಪುರದಂತೆ ಗಂಟಿಕ್ಕಿ, ಕಿವಿಗೆ ಲೋಲಕ್ ರಹಿತವಾದ ವಾಲೆ ಧರಿಸಿ, ಹುಬ್ಬುಗಳಿಗೆ ಕಪ್ಪು ಹಚ್ಚಿ, ತುಟಿಗೆ ರಂಗು ಬಳಿದು, ಎದೆ ತೋಳುಗಳನ್ನು ಖಾಲಿಬಿಟ್ಟು, ತೋಳುಬಂದಿ ಕಂಠೀಸರಗಳಿಂದ ಮಾತ್ರ ಮುಚ್ಚಿ. ಕೈಯಲ್ಲೊಂದು ಎತ್ತರವಾದ ಬಿಲ್ಲು ಸಹಿತ (ಬಾಣ ಇರಕೂಡದು) ಗೆಜ್ಜೆ ಕಾಲಿನಲ್ಲೇ "ಭ್ರೂ ಊ ಊ ಊ" ಎಂದು ಒದರುತ್ತ, ರಂಗಸ್ಥಳಕ್ಕೆ ಬರಬೇಕು.

ಬಂದು, ಕೈ ಮುಗಿದು, ಹೂ ಎರಚಿ, "ನೃತ್ಯವನ್ನು ಪರಮೇಶ್ವರನಿಂದ ಭಾರತ ಮುನಿ ಮೊದಲು ಕಲಿತನೆಂದೂ, ಭರತನಿಂದ ಭಾರತೀಯರೆಲ್ಲರಿಗೂ ಹರಡಿತೆಂದೂ, ನೃತ್ಯ ನಾಲ್ಕು ವಿಧವೆಂದೂ, ಅದನ್ನು ಸಿನಿಮದವರು ಯಾರೂ ಅರಿತಿಲ್ಲವೆಂದೂ, ಏಕೆಂದರೆ, ಸಿನಿಮ ಶಾಸ್ತ್ರವನ್ನು ಭರತ ಬರೆದಿಲ್ಲವೆಂದೂ, ಉಪನ್ಯಾಸ ಮಾಡಬೇಕು. ನಂತರ, ಅಧ್ಯಕ್ಷರಾಗಿ ಆಗಮಿಸಿರುವ ಮಂತ್ರಿಗಳನ್ನು ಹೊಗಳಿ, ತಾನು ಸ್ಥಾಪಿಸ ಬೇಕೆಂದಿರುವ ನೃತ್ಯ ಕಲಾಶಾಲೆಗೆ ಉಚಿತ ನಿವೇಶನ, ಕಟ್ಟಡದ ಗ್ರಾಂಟು, ನಡೆಸಿ ಕೊಂಡು ಹೋಗಲು ವಾರ್ಷಿಕ ಗ್ರಾಂಟು, ಅಲ್ಲಿಯ ವಿದ್ಯಾರ್ಥಿನಿಯರಿಗೆ ಸ್ಕಾಲರ್ ಷಿಪ್ ಹಣ ಇತ್ಯಾದಿಯನ್ನು ಸವಿನಯವಾಗಿ ಬೇಡಬೇಕು.

ನಂತರ, ಎರಡಡಿ ಎತ್ತರಕ್ಕೆ ನಿಂತ ನಿಲುವಲ್ಲೇ ಹಾರಿ, ಬಲಕ್ಕೂ ಎಡಕ್ಕೂ, ಚೇಳು ಕುಟುಕಿದವನಂತೆ ನೆಗೆದು, "ಭ್ರೂ ಊ ಊ ಊ" ಎಂದು ಮತ್ತೆ ಒದರಬೇಕು ಹಿಮ್ಮೇಳದವರಿದ್ದರೆ, ಅವರು, ಇನ್ನುಮುಂದೆ, ಅವನೊಂದಿಗೆ ಸೇರಿ ಒದರಬಹುದು. ಎಲ್ಲರೂ ಒಟ್ಟಾಗಿ,

ಭ್ರೂಲತೆಯ ಸುರಚಾಪ ಉರುಕೇ
ಶಾಳಿಗಳ ಕಾರ್ಮುಗಿಲಪಾಂಗದ
ಸಾಲು ಕುಡಿ ಮಿಂಚುಗಳ ನೂಪುರರವದ ಮೊಳಗುಗಳ |
ಆ ಲತಾಂಗಿಯ ಗಮನವೇ ಮಳೆ
ಗಾಲದಂತಿರೆ ಧಾರ್ತರಾಷ್ಟ್ರಕು
ಲಾಳಿ ನಿಲುವುದೆ ಪವನಜನ ಸಂಪ್ರತಿಯ ಸೇರುವೆಗೆ"

ಎಂದು ಸರಾಗ ಮಾಲಿಕೆಯಲ್ಲಿ ಹಾಡಲು ಯತ್ನಿಸಬೇಕು. "ಉರುಕೇ" "ರಾಷ್ಟ್ರಕು" "ಗಮನವೇ ಮಳೆ" ಎಂಬುದನ್ನು ಗಮನಿಸಿ. ಪಂಕ್ತಿಯ ಕೊನೆ ಬಂದಾಗ, ತಬಲ ಬಡಿತಕ್ಕೆ ಸರಿಯಾಗಿ, ಧ ತಧಿಗಿಣ್ಣ ಥೊಂ, ಎಂದು ಕುಣಿಯಬೇಕು. ಥೋಂ ಎನ್ನುವಾಗ ಸರಿಯಾಗಿ, ಕೇ, ಕು, ಗಳು ಬರಬೇಕು. ಕೈಯಲ್ಲಿರುವ ಬಿಲ್ಲನ್ನು ತಲೆಯ ಸುತ್ತ ಬೀಸುತ್ತ ಕುಣಿದರೆ ಒಳ್ಳಿತು, ಆದರೆ, ಕತ್ತಿಗೆ ಸಿಕ್ಕಿಹಾಕಿಕೊಳ್ಳದೆ ಹುಷಾರಾಗಿ ತಿರುಗಿಸಬೇಕು.

ನಂತರ, ಚಕ್ರಾಕಾರವಾಗಿ ನಾಲ್ಕು ಬಾರಿ ಬಾರಿ ಓಡಾಡಿ, ನಡುವೆ ನಿಂತು ಎರಡುಸಲ ನೆಗೆದು, ಭ್ರೂಲತೆ ಎನ್ನುತ್ತ ಬಳುಕಿ, ಸುರಚಾಪ ಎಂದಾಗ ಕೂತು ಬಿಲ್ಲನ್ನು ಎತ್ತಿ, ಉರುಕೇ ಎನ್ನುತ್ತ ಅರ್ಥವಾಗಲಿಲ್ಲ ಎಂಬ ಸೂಚನೆ ಕೊಟ್ಟು, ಒಂದು ಸಲ ರಂಗಸ್ಥಳವನ್ನು ಸುತ್ತಿ ಬರಬೇಕು.

ಯಥಾಪ್ರಕಾರ, ಎರಡು ನೆಗೆತ. ಕೆಳಕ್ಕೆ ಬರುವಾಗ, ಮಂಡಿಗಳಮೇಲೆ ಕೈ ಊರುವುದೊಳ್ಳೆಯದು. ಚಾಪವನ್ನು ಬಿಸಾಕಿ (ಎಡ ಮಗ್ಗುಲಿಗೆ) ಶಾಳಿಗಳ ಕಾರ್ಮುಗಿಲ ಎನ್ನುತ್ತ ಗಗನದಕಡೆ ಎರಡು ಕೈಗಳನ್ನೂ ಎತ್ತಿ ಹಿಡಿದು ತಲೆಯಸುತ್ತ ಪಟಪಟನೆ ಬೀಸುವುದುತ್ತಮ. ಕಾರ್‌ಮುಗಿಲ ಎನ್ನುವಾಗ, ಕಾರಿನಂತ ಸದ್ದು ಮಾಡಬೇಕು. ಪಾಂಗಡ ಎನ್ನುವಾಗ, ಮುಖವನ್ನು ಪ್ರಶ್ನಾರ್ಥಕ ಚಿಹ್ನೆಯಂತೆ ಸಾಧ್ಯವಿದ್ದಷ್ಟು ಸೊಟ್ಟಗೆ ಹಿಡಿಯಿರಿ.

ಸಾಲುಕುಡಿ ಎಂದರೆ, ಪಡಖಾನೆಯಲ್ಲಿ ಸಾಲಾಗಿ ಕುಳಿತು, ಕುಡಿಯುವ ಚಿತ್ರ ನೋಟಕರಿಗೆ ಬಂದರೆ ಒಳ್ಳೆಯದು. ಉನ್ಮತ್ತರಂತೆ ತೂಗಾಡಿ, ಕುಳಿತು, ಎದ್ದು, ತಲೆಯನ್ನು ಗಿರ್ರನೆ ತಿರುಗಿಸಿ ಕಣ್ಣುಗಳನ್ನು ಹೊರಕ್ಕೆ ತಂದು, ಹುಳಿಮುಖ ರಚಿಸ ಬೇಕು. ಮಿಂಚುಗಳ ನೂಪುರವನ್ನು ನೃತ್ಯದಲ್ಲಿ ತೋರಿಸುವುದು ಕಷ್ಟವಾಗಲಾರದು. "ರವದ ಮೊಳಗುಗಳ"ನ್ನು ತಬಲದವನಿಗೆ ಬಿಟ್ಟುಬಿಡಿ. ಆತನ ಮೊಳಗಿಗೆ ತಕ್ಕಂತೆ, ಗೆಜ್ಜೆಗಳನ್ನೂ ಮೊಳಗಿಸಬೇಕು. ಈ ಪಂಕ್ತಿಯನ್ನು ಹೇಳುವಾಗ, ಎಡಕ್ಕೂ ಬಲಕ್ಕೂ ಓಡಿ ಕುಣಿದರೆ ಸಭಿಕರು ಚಪ್ಪಾಳೆ ತಟ್ಟುತ್ತಾರೆ.

ಆಲ, ಆಲದಮರದ ತಾಂಗಿ ಎಂದು ಕೈಗಳಿಂದಲೇ ಸೊಗಸಾಗಿ ತೋರಿಸ ಬಹುದು, ಭಾರಿಮರ, ಕೊಂಬೆರೆಂಬೆ ಗಿಣಿ ಎರಡು, ಅಜ್ಜ ನಟ್ಟಿದ್ದು, ಇತ್ಯಾದಿ ಹಸ್ತ ಮುದ್ರೆ; ತಾಂಗಿ ಎಂದರೆ, ಎಂಥಾದ್ದಾದರೂ ಇರಲಿ, ನಮಗೇನು? ಗಮನವೇ ಮಳೆ? ಎಂದರೆ, ಮಳೆ ಬರುತ್ತಿದೆಯೆ? ಎಂದು ನೃತ್ಯ ಕಲಾವಿದ ಅತ್ತಿತ್ತ ಕಿವಿಗೊಟ್ಟು, ಆಕಾ ಶದ ಕಡೆ ಕಿವಿಮಾಡಿಸಿ, ನೆಲವನ್ನು ಮೂಸಿನೋಡಿ, ಸೈಡ್ ಕರ್ಟನ್‌ಗಳಕಡೆ ಧಾವಿಸಿ ಸೂಚಿಸಬೇಕು.

ಗಾಳಿದಂತಿರೆ ಧಾರ್ತ ರಾಷ್ಟ್ರಕ, ಧಾರ್ತ ಎಂಬ ರಾಷ್ಟ್ರಕೆ ಯಾವುದೋ ಸಾಲ ಬಂದ ಹಾಗಿರಲು ಎಂಬುದನ್ನೂ ಸಮಯೋಚಿತ ಸನ್ನೆಗಳಿಂದ ಸೂಚಿಸಿ, ಕೊನೆಯ ಪಂಕ್ತಿಯಲ್ಲಿನ ಮೊದಲನೆಯ “ಲಾಳಿ” ನಿಲುವುದೆ? ಎಂಬ ಮಾತನ್ನು ಹೇಳುವಾಗ, ಓಡುವುದು, ನಿಲ್ಲುವುದು, ನಿಂತಾಗ, ನಿಲುವುದೆ ಎಂಬ ಪ್ರಶ್ನೆ; ಪವನ ಎಂದಾಗ ಊ ಎಂದು ಬಲವಾಗಿ ಊದುವುದು, ಜನ ಎಂದಾಗ, ಸಭಿಕರಕಡೆ (ಅಲ್ಲಿ ಯಾರಾದರೂ ಇದ್ದರೆ) ಬೆರಳು ತೋರಿಸುವುದು; ಸಂಪ್ರತಿಯ ಸೇರುವೆಗೆ, ಎಂದಾಗ, ಓಡಿಹೋಗಿ ಹಿಮ್ಮೇಳದವರನ್ನು ಸೇರುವುದು, ಇಷ್ಟೂ ಮಾಡಬೇಕು.

ಇನ್ನು, ಒಂದು ರೌಂಡ್ ಕುಣಿದಾದಮೇಲೆ, ದ್ರೌಪದೀ ನೃತ್ಯ ಮುಗಿಯುವುದು, ಎಂದು ಕಾರ್ಯದರ್ಶಿ ತಿಳಿಸಲಿ.

ತಿಳಿಸಿದ ತಕ್ಷಣ, ಕಲಾವಿದ, ಇಡೀ ಷಟ್ಪದಿಯನ್ನು ಬಿರು ಬಿರನೆ ಬಾಯಲ್ಲಿ ಹೇಳುತ್ತ, ಹಿಂದೆ ಮಾಡಿದ್ದೆಲ್ಲವನ್ನೂ ಮತ್ತೊಮ್ಮೆ ವೇಗವಾಗಿ ಮಾಡಿ, ಕಟ್ಟಕಡೆಗೆ ತಾನೇ ಪರದೆಯನ್ನೆಳೆದು, ನಿಷ್ಕ್ರಮಿಸಬೇಕು.

—ಅಲಿಶಕುಮಾರ್.



“ಇನ್ನೂ ಸ್ವಲ್ಪ ಬಡಿಸನ್ನಾ! ಈವತ್ತು ಏಕಾದಶಿ ಒಪ್ಪತ್ತು, ಉಪವಾಸವಲ್ಲವೆ!”

ನಾಯುಡು ಸಹವಾಸ

ನಾನೂ ಲಾಯರ್ ನಾಯುಡು ಅವರೂ ಮೊನ್ನೆ ಭಾನುವಾರ ಪಾರ್ಕಿನಲ್ಲಿ ಕೂತು ಗಾಳಿ ಕುಡಿಯುತ್ತಿದ್ದೆವು. ಆಕಾಶದಲ್ಲಿ ಹಲವು ತಬ್ಬಲಿ ಮೋಡಗಳು.... ಇತ್ಯಾದಿ ನೀವೇ ಊಹಿಸಿಕೊಳ್ಳಿ ...ಪ್ರಶಾಂತ ವಾತಾವರಣ. ಅದನ್ನು ಭೇದಿಸಿ, ಆಗಾಗ ಹಲವು ಶಿಶುಗಳು ಕಿಲಕಿಲ ನಗುತ್ತಿದ್ದುವು, ವೃದ್ಧರು ಖರಕುರ ಕೆಮ್ಮುತ್ತಿದ್ದರು....

ನಾಯುಡುವಿಗೆ ಸ್ವಭಾವತಃ ದೂರದೃಷ್ಟಿ. ನಮ್ಮೆದುರಿಗಿದ್ದ ಒಂದು ಅರಳಿಯ ಮರದಡಿಯಲ್ಲಿ ಒಬ್ಬ ವ್ಯಕ್ತಿ ನಿಂತಿದ್ದನ್ನು ಅವನು ಪತ್ತೆ ಹಚ್ಚಿದ. ಅವರು ಧರಿಸಿದ್ದ ಉಡುಪು, ಅವರ ಬಾಗಿದಬೆನ್ನು, ಜೋಲು ಮೀಸೆ, ದೇಶಾವರನಗೆ, ಇವೆಲ್ಲವನ್ನು ಅವನು ನನಗೆ ತೋರಿಸಿದ. "ಮಾಜಿ ಮಂತ್ರಿ" ಎಂದು ಅವನು ಆತನನ್ನು ಗುರುತು ಹಿಡಿದ. ಆತ ಅರೆಬಗ್ಗಿನಿಂತು, ಇರುವೆ ಗೂಡೊಂದರ ಮಹಾದ್ವಾರದಲ್ಲಿ ಸಕ್ಕರೆ ಬೆರೆಸಿದ ರವೆಯನ್ನು ಚೆಲ್ಲುತ್ತಿದ್ದ.

ನನಗೆ ಆಶ್ಚರ್ಯವಾಯಿತು. ಏನಿದು? ಪ್ರಾಯಶ್ಚಿತ್ತವೆ, ಪ್ರಮಾಣದ ಬುತ್ತಿಯೆ, ದೀನಸೇವೆಯೆ, ಲೋಕೋಪಕಾರವೇ, ಭಗವತ್‌ಗೀತೆಯೆ, ಪ್ರಾಣಿದಯಾ ಸಂಘವೆ, ಒಂದೂ ತಿಳಿಯಲಿಲ್ಲ. ನಾಯುಡುವನ್ನು ಮತ್ತೊಮ್ಮೆ ಕೇಳಿದೆ. ನಿಜವಾಗಿಯೂ ಆತ ಮಂತ್ರಿಯಾಗಿದ್ದರೇನೋ? ಎಷ್ಟು ವರ್ಷ ಆ ಪದವಿಯನ್ನಲಂಕರಿಸಿದರು? ಎಂದಿನಿಂದ ನಿವೃತ್ತರಾದರು? "ಎಂದೆಲ್ಲ ಪ್ರಶ್ನಿಸಿದೆ. ಅದಕ್ಕೆಲ್ಲ ಸೂಕ್ತ ಉತ್ತರಕೊಟ್ಟ. ಹೆಸರು, ಕುಲ, ವಿಳಾಸ, ಎಲ್ಲವನ್ನೂ ಕೊಟ್ಟ. ಅನುಮಾನಕ್ಕೆ ಆಸ್ಪದವೇ ಇರಲಿಲ್ಲ.

ಆದರೂ, ನನಗೆ ಅಪನಂಬಿಕೆ. ಎಲ್ಲಾದರೂ ಉಂಟೆ?, ಅಂದೆ. ಅದಕ್ಕೆ ನಾಯುಡು, ನೀನೇ ಹೋಗಿಕೇಳು ಅವರನ್ನ, ಅವರೇ ಹೇಳುತ್ತಾರೆ, ಹೌದೋ ಅಲ್ಲವೋ ಅಂತ, ಹೊಗೋ, ಏನೂ ಮಾಡುವುದಿಲ್ಲ ಅವರು ನಿನ್ನನ್ನ, ಅಂದ. ನನ್ನನ್ನ ಹಿಡಿದೆಬ್ಬಿಸಿ ನಿಲ್ಲಿಸಿ ಅವರ ಕಡೆ ನೂಕಿದ, ಕೂತಲ್ಲಿಂದಲೇ.

ನಾನು ಆತನನ್ನು ಸಮೀಪಿಸಿದೆ. ಒಂದು ಮಾರು ಇದ್ದಿರಬಹುದು ಅಂತರ, ಅವರಿಗೂ ನನಗೂ. "ಸ್ವಾಮಿ" ಅಂದೆ. ತಿರುಗಿದರು ನನ್ನ ಕಡೆ, ಸೊಂಟವನ್ನು ನೇರ್ಪಡಿಸಿದರು. "ಸ್ವಾಮಿ! ಕ್ಷಮಿಸಿ, ತಮ್ಮನ್ನ ಒಂದು ಪ್ರಶ್ನೆ ಕೇಳಬೇಕಾಯಿತು" ಅಂದೆ.

" ಕೇಳಿ " ಅಂದರು.

ನನಗೆ ಧೈರ್ಯಬಂತು, " ತಾವು....ಮಾಜಿ ಮಂತ್ರಿಯೇನು ? ಮಂತ್ರಿ ಆಗಿದ್ದರೇನು ?" ಎಂದೆ. " ಏನು ? " ಎನ್ನುತ್ತ ಅವರು ನನ್ನ ಹತ್ತಿರಕ್ಕೆ ಬಂದರು. " ತಾವು ಮಂತ್ರಿಯಾಗಿದ್ದರೇನು, ಹಿಂದೆ" ಎಂದೆ.

" ಹಲ್ಲುದುರಿಸಿ ಬಿಟ್ಟೇನು, ಹುಷಾರ್! ಯಾರನ್ನೋ ನೀನು ಕೇಳೋದು? ಎಂಥದ್ನೋ ನೀ ಕೇಳುವುದು ? ನಿನಗೆ ದೊಡ್ಡರೋಗ ಬಡಿಯಾ! ಬಾರಿಸಿ ಬಿಟ್ಟೇನು ಬೆನ್ನಮೇಲೆ ಎಡಗಾಲಿನದು ತಕ್ಕೊಂಡು " ಎಂದು ಕೂಗಾಡಿದರು.

ನಾನು ನಾಯುಡು ಹತ್ತಿರಕ್ಕೆ ಓಡಿದೆ. ಅವನು ನಗುವಿನಲ್ಲಿ ಮುಳುಗಿದ್ದ. ನನ್ನ ಅವಸ್ಥೆ ನೋಡಿ....ಪಕ್ಕದಲ್ಲಿ ಕೂತ ತಕ್ಷಣ, ಅವನು, " ಲೋ ! ಅಲ್ಲಿ, ಆ ಕಲ್ಲು ಬೆಂಚಿನಲ್ಲಿ ಕೂತಿದಾರಲ್ಲಾ, ಅವರು ಆದಿ ಶಂಕರಾಚಾರ್ಯರ ವಂಶಸ್ಥರು, ಹೋಗಿ ಮಾತಾಡಿಸಿ, ಹೌದೋ ಅಲ್ವೋ ಕೇಳಿಕೊಂಡು ಬಾ "ಅಂತ ನನ್ನನ್ನ ಲೇವಡಿ ಮಾಡಿದ. ನಾಯುಡು ಸಹವಾಸ ನನಗೆ ಜನ್ಮ ಜನ್ಮಕ್ಕೂ ಬೇಡ.

o —



ಅಂದು ಅಮ್ಮನನ್ನು ಅಂಜನೇಯ ಹೆದರಿಸಿದ್ದಾದರೂ ಹೆತ್ತವಳಿಗೆ ಹನುಮಂತ ಬಲು ಮುದ್ದು ಅಲ್ಲವೇ ?

ಕಾದಿರುವನು ಶ್ರೀಹರಿ

ಹೌದು. ಕಾದಿರುವನು ಶ್ರೀಹರಿ....ಇವತ್ತಾದರೂ M O ಬರುವುದೆಂದು.

ಈ M O ಸುದ್ದಿ ಎತ್ತಿದರೆ ನನಗೆ ತುಂಬ ಸಂಕಟವಾಗುತ್ತೆ. ಇದು ಬರೀ ಕಾಗದದ ಮೂಲಕ ಬಂದರೂ, ಪು.ತಿ.ನ ಹೇಳುವಹಾಗೆ, ಇದು "ಲಕ್ಷ್ಮಿಯಿಂದ ಅಧಿಷ್ಠಿತಳಾದ ಸರಸ್ವತಿ" ಅಂದಮೇಲೆ, M O ನ ಕೈ ಹಿಡಿಯೋಕೆ ಯಾರು ತಾನೆ ಎದುರು ನೋಡೋಲ್ಲ? ಆದರೆ ನನ್ನ ಗ್ರಹಚಾರವೋ, ಅಥವಾ M.O ಅನ್ನೋದು ಖುದ್ದಾಗಿ ನನ್ನ ಹೆಸರಿಗೆ ಬರಲೇಕೂಡದು ಅಂತ ಭಾರತ ರಾಜ್ಯಾಂಗ ಶಾಸನದಲ್ಲೇ ಒಂದು ಕಲಂ ಮಾಡಿದ್ದಾರೋ, ಅಂತೂ—ಕಾದಿರುವನು ಶ್ರೀಹರಿ, ಇನ್ನೂ.

ನಾನು ಹಳ್ಳೀಲಿ ಹುಟ್ಟಿ ಬೆಳೀತಿರೋನು. ಆದರೂ ಅಕ್ಷರಸ್ಥ. ಅಂದಮೇಲೆ ಊರಿನ ಕಷ್ಟ ಸುಖ ಏನು ಯಾರಿಗೆ ಬರೀಬೇಕಾದರೂ ನಾನೇ. ಎಲ್ಲ ರೈತರೂ ನನ್ನ ಹತ್ತಿರಕ್ಕೇ ಓಡಿಬರುತ್ತಾರೆ: "ಸೋಮಿ, ಇದು ಒಸಿ ಬರ್ಕೊಡಿ" ಅಂತ. ಹಾಗೇನೇ ಅವರಿಗೆ ಈ M O ಫಾರಮುಗಳು ಭರ್ತಿಮಾಡಿಕೊಡಬೇಕಾದರೂ ನಾನೇ. ಅಷ್ಟೆ ಅಲ್ಲ, ಅವರು M O ರಿಸೀವ್‌ಮಾಡಬೇಕಾದ ಸಂದರ್ಭದಲ್ಲಿ ಸಾಕ್ಷಿ ಗುರುತು ಹಾಕೋನೂ ನಾನೇ. ಆದರೆ ಮಾತ್ರ, ಖುದ್ದಾಗಿ M.O. ಪಡೆದುಕೊಳ್ಳುವ ಅದೃಷ್ಟ ನನ್ನ ಹಣೇಲಿ ಬರೆದಹಾಗಿಲ್ಲ, ಇನ್ನೂ.

ಮನೇಲೂ ಅಷ್ಟೆ. M O ಯಾರಿಗಾದರೂ ಕಳಿಸಬೇಕಾದರೆ ಬರೆಯೋನು ನಾನು, M O ಯಾರಿಂದಲಾದರೂ ತರಿಸಬೇಕಾದರೂ ಬರೆಯೋನು ನಾನೇ. ನಮ್ಮತ್ತೆ ಒಂದುಸಲ ನನ್ನ ಕರೆದು, "ನೋಡೋ! ನಿಮ್ಮ ಮಾವನವರಿಂದ ಯಾಕೋ ಇಷ್ಟು ದಿನ ಆದರೂ M O. ಬರಲಿಲ್ಲ. ಒಂದು ಕಾಗದ ಬರಿ" ಅಂದರು. ನಾನು ಆಗ ಸ್ವಲ್ಪ ಬುದ್ಧಿವಂತಿಕೆ ಉಪಯೋಗಿಸಿ, ನನ್ನ ವಿಳಾಸ ಕೊಟ್ಟು ಅವರಿಗೆ ಕಾಗದ ಬರೆದೆ. ನನ್ನ ವಿಳಾಸಕ್ಕೇನೆ M.O. ಏನೋ ಬಂತು, ಆದರೆ ಅದರ ತಲೆ ಮೇಲೆ ನಮ್ಮ ಅತ್ತೆ ಹೆಸರನ್ನ C/o ನನ್ನ ಹೆಸರಿಗೆ ಬರೆದುಬಿಟ್ಟಿದ್ದರು. ಆಯ್ತಲ್ಲ!

ಬುದ್ಧಿ ಇದ್ದವನಿಗೆ ದುಡ್ಡು ತರಿಸಿಕೊಳ್ಳೋಕೆ ಒಂದು ದಾರೀನೆ? ತುಮಕೂರಿನಲ್ಲಿ ನಮ್ಮ ಚಿಕ್ಕಪ್ಪ ಒಬ್ಬರಿದ್ದಾರೆ—ಇಂಜಿನಿಯರು. ಅವರಿಗೆ ಏನೋ ಸಬೂಬು

ಬರೆದು, ಮೂರು ರೂಪಾಯಿ ಮಣಿಯಾರ್ಡರು ಮಾಡಿ ಅಂತ ಕೇಳಿಕೊಂಡೆ. ಅವರಿಂದ ಜವಾಬು ಬಂತು: "ನಿಮ್ಮ ಚಿಕ್ಕಮ್ಮ ಹತ್ತುರೂಪಾಯಿ ಕೇಳಿದ್ದಳು. ಎರಡು M.O ಬೇರೆ ಬೇರೆ ಯಾಕೆ ಅಂತ ಅವಳ ಹೆಸರಿಗೇ ಹದಿಮೂರು ಕಳಿಸಿದ್ದೇನೆ. ಅದರಲ್ಲಿ ಮೂರು ನೀನು ತೆಕೋ." ನಿಜವಾಗಿಯೂ ತೆಕೋಬೇಕು ಅನ್ನಿಸ್ತು! ಆದರೆ ಯಾದೂ ಕೈಗೆ ಸಿಕ್ಕಲಿಲ್ಲ, ತೆಕೋಳೋಕ್ಕೆ.

ಉಸಿರಿರೋವರೆಗೂ ಆಸೆ ಇರುತ್ತೆ—ಅಂತ ದೊಡ್ಡೋರು ಹೇಳ್ತಾರೆ. ನಾನಂತೂ ನಮ್ಮ ಪೋಸ್ಟ್‌ಮ್ಯಾನನ್ನ ಕಂಡಾಗಲೆಲ್ಲ "ಏನೂ M.O ಇಲ್ಲವೆ?" ಅಂತ ತಪ್ಪದೆ ಕೇಳತಿದ್ದೆ. ಅವನು ಪೋಸ್ಟ್‌ಮ್ಯಾನ್ ಆದ್ರೂ ಜೆಂಟಲ್‌ಮ್ಯಾನ್. "ಇಲ್ಲ" ಅಂತ ಒಂದೇಸಲ ಮುಖ ಮುರೀತಿರಲಿಲ್ಲ. "ಯಾವುದೋ ಇದ್ದ ಹಾಗಿತ್ತು" ಅಂತ ನಿದಾನವಾಗಿ ಹುಡುಕೋನು...."ಅಲ್ಲ, ಶ್ರೀಹರಿರಾಯರದಲ್ಲ, ನರಹರಿರಾಯರದು" ಅಂತೆ ತಲೆಯಾಡಿಸಿ ಹೋಗೋನು. ಒಂದೊಂದುಸಲ "ಊಂ, ಏನೋ ಒಂದು ಇದೆ. M.O ಅಲ್ಲ, M.O. ರಸೀತಿ" ಅಂತ ಅದನ್ನ ತೆಗೆದುಕೊಡೋನು. ನೋಡಿದರೆ, ಅದು ನಾನು ನನ್ನ ಭಾವನಿಗೆ ದುಡ್ಡು ಕಳಿಸಿದ್ದಕ್ಕೆ, ಅವನು ಅದನ್ನ ಸ್ವೀಕರಿಸಿದ್ದಕ್ಕೆ—ನನಗೆ ಬಂದ ರಸೀತಿ!

ಅಯ್ಯೋ, ಈ M O. ಶಾರದಾಲಕ್ಷ್ಮಿ ನನ್ನನ್ನ ಚಿಟುಕುಮುಳ್ಳಾಡಿಸುತ್ತಿರೋದು ಹೇಳತಾಹೋದರೆ, ಅದೇ ಒಂದು ಬ್ರಹ್ಮಾಂಡ ಪುರಾಣ. ಇಲ್ಲ, ಅದರ ಅಪ್ಪನ ಅಪ್ಪನ ಪುರಾಣ ಆದರೂ ಆಗಬಹುದು.

ಒಂದು ಸಲ ಏನಾಯ್ತು—ಈ ಬಡಪ್ರಾಣಿ ಮೇಲೆ ದೇವರು ತನ್ನ ಕೃಪಾ ಕಟಾಕ್ಷ ಬೀರಿದಹಾಗೆ ಆಕಾಶವಾಣಿಯಿಂದ ನನಗೊಂದು ಆಹ್ವಾನ ಬಂತು. ವಿಷಯ—ವಿಚಿತ್ರ : "ಇವತ್ತೂ M.O ಬರಲಿಲ್ಲ." ಅದು ಹೇಗೆ ಗೊತ್ತಾಯಿತೋ ಅವರಿಗೆ—ನಾನೇ ಇದಕ್ಕೆ ಅರ್ಹನಾದ ಆಸಾಮಿ ಅಂತ? ಸರಿ, ಒಪ್ಪಿಕೊಂಡೆ, ಹೋದೆ, ಮಾತನಾಡಿದೆ. ಸಂಭಾವನೆ ಕೊಡತೇವೆ, ಅಂದರು. ಊರಿಗೆ ದಯಮಾಡಿ ಕಳಿಸಿ, ಇಲ್ಲಿ ಬೇಡ, ಅಂತ ಓಡಿದೆ. ಊರಲ್ಲಿ ಕಾದೆ. ಸಂಭಾವನೆ ಬಂತು. ಆದರೆ ಪಾಪಿ ಪರಲೋಕಕ್ಕೆ ಹೋದರೂ ಅಂತನ್ನೋ ಹಾಗೆ, ಮೈಸೂರಿನ ಟ್ರೆಷರಿ ಆರ್ಡರ್ ಒಂದು ಲಕೋಟೆಯಲ್ಲಿ ಬಂತೇ ಹೊರತು, M·O ರೂಪದಲ್ಲಿ ನನ್ನ ಮೋಹಿನಿ ನನಗೆ ಮಾಲೆ ಹಾಕಲಿಲ್ಲ.

ಆದರೇನು—'ಧೈರ್ಯಂ ಸರ್ವತ್ರ ಸಾಧನಂ.' ಮೈಸೂರಿನ ನಮ್ಮ ಬೀಗರಿಗೆ ಆ ಟ್ರೆಷರಿ ಆರ್ಡರ್ ಕಳಿಸಿ, ಅದನ್ನ ಕ್ಯಾಷ್‌ಮಾಡಿದ ದುಡ್ಡು M.O ಮಾಡಿ ಅಂತ ಬರೆದೆ. ಮೂರು ದಿವಸ ಆದಮೇಲೆ ಅವರು ಬರೆದರು. "ಕ್ಯಾಷ್ ಆಯ್ತು. ಆದರೆ ಹುಡುಗನ ಅಪ್ಲಿಕೇಷನ್ ಫೀಸಿಗೆ ಸಾಲದೆ ಬಂದದ್ದರಿಂದ ಬಳಸಿಕೊಂಡಿದ್ದೇನೆ.


ಮುಂದಿನ ತಿಂಗಳು ಅಲ್ಲಿಗೆ ಬರಬೇಕಾಗಿದೆ. ಮೊಕ್ತಾ ಪಾವತಿಮಾಡುತ್ತೇನೆ." ಅಂತ.

ಮುಂದಿನ ತಿಂಗಳು ಬಂದೀತೇ ಅಂತ ಮಳೆಹನಿಗೆ ಚಾತಕ ಕಾಯುತ್ತಂತಲ್ಲಾ ಹಾಗೆ ಕಾದೆ. ಒಂದು ದಿನ ಪೋಸ್ಟ್‌ಮನ್ ನನ್ನ ಹೆಸರುಹಿಡಿದು ಕೂಗಿದ. ಮೈಯೆಲ್ಲಾ ಜುಮುಜುಮು ಅಂತು. ಕೈ ನೀಡಿದೆ. ಒಂದು ಲಕೋಟಿ ಕೊಟ್ಟ. ಒಡೆದು ನೋಡಿದರೆ, ಹದಿನೈದು ರೂಪಾಯಿಗೆ ಒಂದು ಪೋಸ್ಟಲ್ ಮನಿಆರ್ಡರ್! ಸ್ತ್ರೀ ಬರಬೇಕಾಗಿದ್ದ ಕಡೆ ಶಾಸ್ತ್ರೀ ಬಂದರೆ ಎಷ್ಟು ಮರಣಾನಂದವಾಗಬಹುದೋ ಅಷ್ಟೇ ಆಯಿತು, ಮನಿಆರ್ಡರ್ ಅನ್ನು ಎದುರು ನೋಡುತ್ತಿದ್ದ ನನಗೆ ಪೋಸ್ಟಲ್ ಮನಿಆರ್ಡರ್ ಬಂದಾಗ!


ಕಡೆಗೆ ಈಗೊಂದು ತೀರ್ಮಾನಕ್ಕೆ ಬಂದಿದ್ದೇನೆ.' ಎಂದರೆ—ಒಳ್ಳೆ ಸಾಹುಕಾರ್ರ ಹುಡುಗಿ ಯಾರನ್ನಾದರೂ ಚುನಾಯಿಸಿ ಮದುವೆ ಮಾಡಿಕೊಂಡುಬಿಡೋದು. ಮಾವನ ಖರ್ಚಿನಲ್ಲಿ ಬೆಂಗಳೂರಿನಲ್ಲಿ ಓದೋಕ್ಕೆ ಹೋಗಿ ಹಾಸ್ಟಲಿನಲ್ಲಿದ್ದುಬಿಡೋದು. ಆಗಂತೂ M O. ಬರಲೇಬೇಕಲ್ಲ!

ನೋಡಿ, ಅಂಥವರು ಯಾರಾದರೂ ಮಾವಂದಿರಾಗುವವರು ಇದ್ದರೆ, ಕಾದಿರುವನು—

—ಶ್ರೀಹರಿ.



ಈ ಮಾಣಿಗಳು ಕೇಳೋ ಸಂಬಳ ಕೊಡುಕ್ಕಾಗದೆ—ಈ ಉಪಾಯವ್ಯವಸ್ಥೆ ಏರ್ಪಡಿಸಿದ್ದೇನೆ.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ — — — ಬೆಂಗಳೂರು 3.



ಕೊರವಂಜಿ

ಬಳೇಪೇಟೆ : : ಬೆಂಗಳೂರು 2

o —

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ಕೇವಲ 3 ರೂ ಗಳು (ಅಂಚೆ ವೆಚ್ಚ ಸಹಿತ)

ನಮ್ಮ ಹೊಸ ಮಾರಾಟಗಾರರು:

Sri KOTRESAPPA,
Kottur.

Sri. MALLESAPPA,
Bellary

ದೇವರ ದಯೆ

ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿದ್ದ ದೇವದೂತರು ನಮ್ಮನ್ನು ಕೈಹಿಡಿದು ಮುನ್ನಡೆಸುತಿದ್ದ ಕತೆ ಹಿಂದಿನ ಕಾಲದ ಸಂಗತಿ. ಇದನ್ನು ದೇವರ ದಯೆ ಎಂಬುದಾಗಿ ಆಗ ಜನರು ಕೊಂಡಾಡುತಿದ್ದರು.-

ದೇವರ ದಯೆ ಈಗಲೂ ಇದೆ–ಅದರ ಸ್ವರೂಪದಲ್ಲಿಮಾತ್ರ ಪರಿವರ್ತನೆಯಾಗಿದೆ. ಸ್ವರ್ಗದಿಂದ ದೇವದೂತರು ಇಳಿದು ಬಂದು ತಮ್ಮನ್ನು ಸುಧಾರಿಸಬೇಕೆಂದು ವಿವೇಕಿಗಳು ಈಗ ಅಪೇಕ್ಷಿಸುವುದಿಲ್ಲ. ಈಗ ದೇವರ ದಯೆಯಿಂದ ನಮಗೆ ಅವಶ್ಯವೆನಿಸಿದ ವಿಮಾ ಸೌಲಭ್ಯವಿದೆ. ಇಂದೇ ವಿಮೆ ಇಳಿಸಿ, ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯನ್ನು ಮಾಡಿಕೊಳ್ಳಿರಿ. ತನ್ನ ರಕ್ಷಣೆ ತಾನು ಮಾಡಿಕೊಳ್ಳ ಬಲ್ಲವನನ್ನು ದೇವರು ಕೈ ಬಿಡುವುದಿಲ್ಲ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿ.

ಪ್ರಧಾನ ಕಾರ್ಯಾಲಯ : **ಉಡುಪಿ.** ದ. ಭಾರತ ಸ್ಥಾಪನೆ : ೧೯೩೫

ಸ್ಥಾಪನೆಯಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಕಂಪೆನಿ.

The Canara Mutual Assurance Co., Ltd.

Head Office: **UDIPI** (S. India) Estd: 1935

ಯಾವ ಹೆಂಗಸೂ ಅಸಂತೃಪ್ತಿಪಡಲಾರಳು!



ಅರುಣ ಸೇವನೆಯಿಂದ ನಕಲ ಗರ್ಭಾಶಯ ರೋಗಗಳೂ ನಿವಾರಣೆಯಾಗಿ ವೃದ್ಧಕಾಯರಾಗುತ್ತಾರೆ, ಉತ್ತಮ ವನಸ್ಪತಿಗಳಿಂದ ತಯಾರಾದ ಇವರ ಸೇವನೆಯಿಂದ ಸ್ತ್ರೀಯರ ಸಕಲ ರೋಗಗಳೂ ನಿವಾರಣೆಯಾಗಿ ಸತ್ಸಂತಾನವನ್ನೂ ಪಡೆಯುವರು.



ಅರುಣ

ಉತ್ತಮ ಗರ್ಭಾಶಯ ರೋಗ ನಿವಾರಣೆ ಮತ್ತು ಬಲವರ್ಧಕ ಔಷಧಿ

ಆಯುರ್ವೇದಾಶ್ರಮಂ ಲಿಮಿಟೆಡ್ ಮದರಾಸು ೧೭



ಬಡಿದು ಒಗೆಯದೆ ಬಟ್ಟೆಗಳನ್ನು ಬೆಳ್ಳಗೆ ಮತ್ತು ಪ್ರಕಾಶಮಾನವಾಗಿ ಮಾಡುತ್ತದೆ!

S. 184-60 KN

ಜೀವ ವಿಮೆ

ಗಂಡನ ಕರ್ತವ್ಯವೂ
ಹೆಂಡತಿಯ ಹಕ್ಕೂ
ಮಗುವಿನ ಅವಶ್ಯಕತೆಯೂ

ಆಗಿದೆ

ಮೈಸೂರು ಸರ್ಕಾರದ
- ವಿಮಾ ಇಲಾಖೆ -

ಮೂವತ್ತುಮೂರು ವರುಷಗಳ
ನಂಬಿಕೆ, ಸೇವೆ, ಸಹಕಾರ

ಸಲ್ಲಿಸಿದೆ

★


ಪೂರ್ಣ ಭದ್ರತೆ—ತೀರ ಕಡಿಮೆ ವೆಚ್ಚ, ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು ! ಅತ್ಯನುಕೂಲವಾದ ಪ್ರೀಮಿಯಂ ದರ—ಸುಲಭವಾದ ಸಾಲದ ಸೌಕರ್ಯ, ತಡವಿಲ್ಲದ - - - - ವಿಮಾ ಮೊಬಲಗಿನ ಪಾವತಿ - - - -

★

ಪ್ರಜೆಗಳ ಶಾಖೆಯಲ್ಲಿ ವಿಮೆ ಮಾಡಲು ಇಂದೇ ನಿರ್ಧರಿಸಿ

★

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು


ರುಚಿಯಾದ
ನರ್ಗಿಸಿ
ಕಬಾಬ್
ಈ ರೀತಿ
ಸುಲಭವಾಗಿ ಮಾಡಬಹುದು:
1 ಕಪ್ ಕಡಲೆಬೇಳೆಯನ್ನು ರಾತ್ರಿಯೆಲ್ಲಾ ನೆನೆ
ಹಾಕಿರಿ ಕಡಲೆಬೇಳೆ, 1 ಪೌಂಡು ಸಣ್ಣ ಚೂರು
ಗಳಾಗಿ ಕತ್ತರಿಸಿದ ಮಾಂಸ, ಹಸಿಮೆಣಸಿನಕಾಯಿ
ಗಳು, ಸ್ವಲ್ಪ ಒಣಮೆಣಸುಗಳು, ಕೊಂಚ ಅರಿಶಿಣ
ಪುಡಿ, ಮೆಣಸಿನಕಾಯಿಪುಡಿ, ಜೀರಿಗೆ, ದಾಲ್ಚಿನ್ನಿ,
ಲವಂಗಗಳು, ಉಪ್ಪು ಇವುಗಳನ್ನೆಲ್ಲಾ ಕಲಸಿ
ಚನ್ನಾಗಿ ರುಬ್ಬಿರಿ ಚನ್ನಾಗಿ ಬೇಯಿಸಿದ ಮೊಟ್ಟೆ
ಗಳಿಗೆ ಒದ್ದೆಯಾದ ಬೆರಳುಗಳಿಂದ ರುಬ್ಬಿದ ಮಸಾಲೆ
ಯನ್ನು ಹಚ್ಚಿರಿ ಕಬಾಬುಗಳಂತೆ ಡಾಲ್ಡದಲ್ಲಿ
ಕರಿಯಿರಿ ಹೆಚ್ಚಿದ ಈರುಳ್ಳಿಗಳ ಜೊತೆಗೆ ಬಡಿಸಿರಿ
ಇದನ್ನು ಕೊಳ್ಳಲು ಮರೆಯಬೇಡಿರಿ!
ಹೊಸ ಡಾಲ್ಡ ಪಾಕ ಪುಸ್ತಕ,
ಇಂಗ್ಲೀಷಿನಲ್ಲಿ — ಚಿತ್ರಗಳ
ಸಹಿತ — ಆರ್ಟ್ ಪೇಪರು —
80 ಪುಟಗಳು — 300 ಪಾಕ
ವಿಧಾನಗಳು — ಆರೋಗ್ಯ,
ಶುಚಿತ್ವ, ಅಡಿಗೆಮನೆ ವಿಷಯಗಳ ಮೇಲೆ ಸೂಚನೆ
ಗಳು — ಬೆಲೆ ರು 1 ಮಾತ್ರ ಮತ್ತು 8 ಆಣೆ
ಟಪಾಲು ಚಾರ್ಜು.
ದಿ ಡಾಲ್ಡ ಅಡ್ವೈಸರಿ ಸರ್ವಿಸ್
ಪೋಸ್ಟ್ ಬಾಕ್ಸ್ ನಂ 353, ಬೊಂಬಾಯಿ 1
ಡಾಲ್ಡದಲ್ಲಿ
ಮಾಡಿದ್ದು
ಅತ್ಯುತ್ತಮವಾದ ರುಚಿಗಾಗಿ ನಿಮ್ಮ
ಖಾರ, ಸಿಹಿ ಮತ್ತು ಇತರ ತಯಾರಿ
ಕೆಗಳನ್ನು ಡಾಲ್ಡದಲ್ಲಿ ತಯಾರಿಸಿರಿ.
ಡಾಲ್ಡ ಶುದ್ಧವಾದದ್ದು ಮತ್ತು
ಪೌಷ್ಟಿಕರವಾದದ್ದು ಅದು ಸೀಲ್
ಮಾಡಿದ ಡಬ್ಬಗಳಲ್ಲಿ
ನಿಮಗೆ ಹಸನಾಗಿ
ಮತ್ತು ಸ್ವಚ್ಛವಾಗಿ
ದೊರೆಯುತ್ತದೆ
DALDA
HYDROGENATED
GROUNDNUT
AND TIL OIL
ಸಮತೂಕಾಹಾರದಲ್ಲಿ ನಿಮಗೆ ಬೇಕಾದ ಕೊಬ್ಬನ್ನು ಒದಗಿಸುತ್ತದೆ
HVM 171 50 KN

ಮನೆಗೆ ಶಾಂತಿ ! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!

ಕಣ್ಣುಗಳಿಗೆ ತಂಪು ಬೀರುವುದು,
ದೇದೀಪ್ಯಮಾನ

ಮೈಸೂರು ಬಲ್ಬು



ಅದು ಭಾರತದ್ದು !
ಸುಲಭ ಬೆಲೆಯದು !
ಹೆಚ್ಚು ಬಾಳಿಕೆ ಬರುವುದು !!

ಫೋನ್ : 2025 ಗ್ರಾಮ್ : 'Mysorlamp'

ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,
ಮಲ್ಲೇಶ್ವರಂ – – – ಬೆಂಗಳೂರು 3




In your Make-up Locks Count a lot...

RAJA
AMLA
HAIR OIL

"HELPS YOU TO KEEP LOCKS OF LOVELY AND LUSTROUS HAIR"



MANYAM & CO., BANGALORE - MADRAS - MADURA - BOMBAY


ಪ್ರತಿ ಕೆಲಸಕ್ಕೂ ಪ್ರತ್ಯೇಕವಾದ
ಷಾಲಿಮಾರ್ ಪೇಯಿಂಟ್
ಇದೆ
ಜಾಣರು ಷಾಲಿಮಾರ್ ಪೇಯಿಂಟನ್ನೇ
ಉಪಯೋಗಿಸುತ್ತಾರೆ
SPX 83A-KN
SHALIMAR PAINT
SHALIMAR PAINT, COLOUR & VARNISH CO., LTD.
POST BOX 136, MADRAS 1

"ಚರ್ಮಸೌಂದರ್ಯಕ್ಕೆ

ಲಕ್ಸ್ ಟಾಯಿಲೆಟ್ ಸೋಪು

ಅತ್ಯುತ್ತಮವಾದದ್ದು" ಎಂದು ಎಸ್.

ವರಲಕ್ಷ್ಮೀ

ಹೇಳುತ್ತಾಳೆ



ಬೆಳ್ಳಗಿರುವ ಶುದ್ಧವಾದ ಮತ್ತು ಸುಂದರವಾದ ಸುವಾಸನೆಯುಳ್ಳ ಈ ಸೋಪು ನಿಮ್ಮ ಚರ್ಮವನ್ನು ಕೂಡಾ ಸುಂದರವಾಗಿಡಲಿ!

ಸಿನೆಮ ತಾರೆಯರ
ಸೌಂದರ್ಯದ ಸೋಪು

LTS. 384-60 KN

ನಂಬಿಕೆಗೆ ಅರ್ಹತೆ !

★ ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ

★ ನೀವು ಏನೇನು ಗುಣಗಳನ್ನು

★ ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವುವು ಎಂದು ಖಚಿತವಾಗಿ ಹೇಳುತ್ತೇವೆ.

———— ★ ————

—: ಎಲ್ಲಾ ಕಡೆಗಳಲ್ಲೂ ದೊರಕುವುದು :—

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು